# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ

**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |

ಸಂಪುಟ : 12    ಸಂಚಿಕೆ : 1    ಖಾಸಗಿ ಪ್ರಸಾರಕ್ಕಾಗಿ    ಫೆಬ್ರವರಿ 2021–ಆಗಸ್ಟ್ 2021





## ಅಧ್ಯಕ್ಷರ ನುಡಿ

ಬೃಹಚ್ಚರಣ ಪರಿವಾರದವರಿಗೆಲ್ಲ ನಮಸ್ಕಾರ.


ಕೊರೋನಾ ಪಿಡುಗು ಇನ್ನು ಮುಂದೆ ಶೀಘ್ರದಲ್ಲಿಯೇ ಇಲ್ಲವಾಗುವುದೆಂಬ ಆಶಯ ಮತ್ತು ಪ್ರಾರ್ಥನೆಯೊಂದಿಗೆ ನೊಂದಿರುವ ಪರಿವಾರಗಳ ಭಾವನೆಗಳಿಗೆ ಎದೆಯಾಳದಿಂದ ಸ್ಪಂದಿಸುತ್ತಿದ್ದೇನೆ.

ಈ ಕ್ಯಾಲೆಂಡರ್ ವರ್ಷದಲ್ಲಿ ಮೊದಲಬಾರಿಗೆ ಬೃಹಚ್ಚರಣ ಸಂಚಿಕೆಯು ನಿಮ್ಮ ಕೈಸೇರಲಿದೆ. ಈ ಆವೃತ್ತಿಯನ್ನು ಮೆಚ್ಚಿಕೊಳುತ್ತೀರೆಂದು ನಂಬಿದ್ದೇನೆ. ಸದಸ್ಯರು ಹಾಗೂ ಅವರ ಪರಿವಾರದವರು ಹೆಚ್ಚಿನ ಸಂಖ್ಯೆಯಲ್ಲಿ ಲೇಖನಗಳನ್ನು ಕಳುಹಿಸಬೇಕೆಂದು ಕೋರುತ್ತೇನೆ. ಸಂಘದ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹಪೂರ್ವಕವಾಗಿ ನೆರವು ನೀಡುತ್ತಿರುವ ಮಹನೀಯರಿಗೂ, ಮಹಿಳೆಯರಿಗೂ ಕಾರ್ಯಕಾರಿ ಸಮಿತಿ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.



**ಬಿ. ಸುಬ್ರಹ್ಮಣ್ಯಂ**
ಅಧ್ಯಕ್ಷರು

## ಕೃತಜ್ಞತೆ



ಸಂಘದ ಹಿರಿಯ ಪೋಷಕರಾದ **ಶ್ರೀ ಸೋಮಸುಂದರ** ಅವರು ಸಂಘದ ಅಧ್ಯಕ್ಷರಾಗಿ 2010–2019ರವರೆಗೂ ನಿಸ್ಪೃಹ, ಸಕ್ಷಮ ಸೇವೆ ಸಲ್ಲಿಸಿ ಸಂಘದ ಅತ್ಯುತ್ತಮ ಸರ್ವತೋಮುಖ ಬೆಳವಣಿಗೆಗೆ ಕೊಡುಗೆ ನೀಡಿರುತ್ತಾರೆ. ಸಂಘದ ಮುನ್ನಡೆಗೆ ಮುಂದಾಳತ್ವ ವಹಿಸಿ, ತನ್ನೊಂದಿಗೆ ಇತರ ಕಾರ್ಯಕಾರಿ ಸಮಿತಿ ಸದಸ್ಯರೊಟ್ಟಿಗೆ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದುದು ಎಲ್ಲಾ ಸದಸ್ಯರಿಗೂ ಮೆಚ್ಚುಗೆಯಾಗಿದೆ.

ಈಗ ವೈಯುಕ್ತಿಕ ಕಾರಣಗಳಿಂದ ಕಾರ್ಯಕಾರಿ ಸಮಿತಿಯಲ್ಲಾಗಲಿ, ಪತ್ರಿಕೆಯ ಸಂಪಾದಕೀಯ ಮಂಡಲಿಯಲ್ಲಾಗಲಿ ಮುಂದುವರೆಯಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿ ಸಂಘಕ್ಕೆ ಶುಭ ಹಾರೈಸಿದ್ದಾರೆ.

ತಮ್ಮ ಈ ನಿರ್ಧಾರವನ್ನು ಬದಲಿಸಬೇಕೆಂಬ ಕಾರ್ಯಕಾರಿ ಸಮಿತಿಯ ಸದಸ್ಯರ ಕೋರಿಕೆಗೆ ಉತ್ತರಿಸುತ್ತಾ ತಮ್ಮ ನಿಲುವನ್ನು ಬದಲಾಯಿಸ ಲಾಗುವುದಿಲ್ಲವೆಂದು ವಿನಮ್ರತೆಯಿಂದ ತಿಳಿಸಿರುತ್ತಾರೆ. ಹೀಗಾಗಿ ಕಾರ್ಯಕಾರಿ ಸಮಿತಿಯು ಶ್ರೀಯುತರನ್ನು ಸೌಹಾರ್ದತೆಯಿಂದ ಬೀಳ್ಕೊಡುತ್ತಾ, ಭಗವಂತನು ಅವರಿಗೆ ಆರೋಗ್ಯ, ಮನಃಶಾಂತಿ ಕರುಣಿಸಲೆಂದು ಕೋರುತ್ತೇವೆ.

ಕಾರ್ಯಕಾರಿ ಸಮಿತಿ ಪರವಾಗಿ
**ಬಿ. ಸುಬ್ರಹ್ಮಣ್ಯಂ,** ಅಧ್ಯಕ್ಷರು

## ಕಾರ್ಯದರ್ಶಿ ನುಡಿ

ಸಂಘದ ಚಟುವಟಿಕೆಗಳಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಭಾಗವಹಿಸುತ್ತಿರುವ ಎಲ್ಲರಿಗೂ ಧನ್ಯವಾದಗಳು. ಮುಂಬರುವ ಗೌರಿ–ಗಣೇಶ, ಅನಂತ ಪದ್ಮನಾಭ, ದಸರಾ, ದೀಪಾವಳಿ ಹಬ್ಬಗಳು ನಿಮ್ಮೆಲ್ಲರಿಗೂ ಶುಭ ತರಲೆಂದು ಹಾರೈಸುತ್ತೇನೆ.

ಸಂಘದ ಚಟುವಟಿಕೆಗಳು ಕೊರೋನಾ ಮಹಾಮಾರಿಯಿಂದ ಸ್ಥಬ್ದವಾಗಿರುವುದು ನಿಮಗೆ ತಿಳಿದ ವಿಷಯವೇ ಆಗಿದೆ. ವಾರ್ಷಿಕ ನಿರ್ವಹಣಾ ವೆಚ್ಚ ನೀಡಿರುವ ಸದಸ್ಯರೆಲ್ಲರಿಗೂ ವಂದಿಸುತ್ತಾ, ನೀಡಬೇಕಾಗಿರುವವರು ಕೂಡಲೇ ಜಮಾ ಮಾಡಲು ಬಿನ್ನಹ.

ಸರ್ವಸದಸ್ಯರ ಸಭೆ ದಿನಾಂಕ 3–10–2021ರಂದು ಶ್ರೀ ಭ್ರಮರಾಂಭ ಕಲ್ಯಾಣಮಂಟಪ (ಮಲ್ಲಿಕಾರ್ಜುನ ದೇವಸ್ಥಾನದ ಆವರಣ, ಬಸವನಗುಡಿ)ದಲ್ಲಿ ನಡೆಯಲು ತೀರ್ಮಾನಿಸಲಾಗಿದೆ.

ಕೊರೋನಾ ಬೇನೆಯಿಂದ ನಮ್ಮವರು ಅನೇಕರು ನಮ್ಮನ್ನಗಲಿದ್ದು ಅವರಿಗೆ ಸಂಘವು ಮೌನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ನಾಗಾರಾಧನೆಯು ಅತ್ಯಂತ ಸರಳತೆಯಿಂದ ಹಾಗೂ ಯಶಸ್ವಿಯಾಗಿ ನಡೆಯಲು ಕಾರ್ಯಕಾರಿ ಸಮಿತಿಯೊಂದಿಗೆ ವೇ॥ಬ್ರ॥ ಸೂರ್ಯನಾರಾಯಣ ದೀಕ್ಷಿತ್ ಹಾಗೂ ಅವರ ಸಹೋದರರು ಸಹಕರಿಸಿದ್ದಕ್ಕೆ ವಂದನೆಗಳು. ಸ್ಥಳೀಯ ಬೃಹಚ್ಚರಣ ಸಂಘದ ಶ್ರೀಯುತರಾದ ವಿ.ಎಸ್. ಮಣಿ, ಟಿ.ಎಸ್. ಮಣಿ ಹಾಗೂ ಎಸ್. ಸತ್ಯನಾರಾಯಣ(ಸತೀಶ್) ಅವರ ಸೇವೆ ಸ್ಮರಣೀಯ.



**ಎಸ್.ಸಿ. ಶ್ರೀನಿವಾಸ**
ಕಾರ್ಯದರ್ಶಿ

## ಸಂಪಾದಕೀಯ

ನಮಸ್ಕಾರ,

ಬೃಹಚ್ಚರಣ ಸಂಚಿಕೆ ಉತ್ತಮವಾಗಿ ಬರುತ್ತಿರುವುದಕ್ಕೆ ತಮ್ಮೆಲ್ಲರ ಸಹಕಾರಕ್ಕೆ ವಂದನೆಗಳು. ಇದೇ ರೀತಿ ತಮ್ಮ ಸಹಕಾರ ಮುಂದುವರೆಸಲು ಕೋರಿಕೆ. ಸದಸ್ಯರು ಉತ್ತಮ ಲೇಖನ ಹಾಗೂ ಚಿತ್ರಗಳನ್ನು ಕಳುಹಿಸಲು ಬಿನ್ನಹ. ನಿಮ್ಮ ಅನಿಸಿಕೆ ತಿಳಿಸಿ.



**ಕೆ.ಸಿ. ನಟರಾಜನ್**
ಸಂಪಾದಕ


9845113475
mmdbs.mag@gmail.com

# ಸುದ್ದಿ ಚಿತ್ರಗಳು



ಸಂಘದ ಸದಸ್ಯ ಶ್ರೀ **ಗುರುಪ್ರಸನ್ನರವರಿಗೆ** ಗೋಕುಲಂ ಸಂಗೀತಶಾಲೆಯವರು 'ಕಲಾವತಂಸ' ಎಂಬ ಪ್ರಶಸ್ತಿಯನ್ನು 8-8-2021ರಂದು ನೀಡಿ ಗೌರವಿಸಿರುತ್ತಾರೆ



ಸಂಘದ ಸದಸ್ಯ, ಎಸ್.ಬಿ.ಐ. ಸಿ.ಜಿ.ಎಂ. ಶ್ರೀ **ಆರ್.ಎಸ್. ರಮೇಶ್‌ರವರು** ಭಾರತ ಸರ್ಕಾರದ ಆರ್ಥಿಕ ಮಂತ್ರಿ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರನ್ನು ಭೇಟಿ ಮಾಡಿದ ಸಂದರ್ಭ



ಸಂಘದ ಸದಸ್ಯ ಶ್ರೀ **ಆರ್.ಪಿ. ಮೋಹನ್** ರವರು ಬಿ.ಇ.ಎಲ್.ನ ಜನರಲ್ ಮ್ಯಾನೇಜರ್ ಆಗಿ ಬಡ್ತಿ ಹೊಂದಿರುತ್ತಾರೆ



ಕಾರ್ಯಕಾರಿ ಸಮಿತಿ ಸದಸ್ಯ **ಶ್ರೀ ಟಿ.ಪಿ.ಸೂರ್ಯನಾರಾಯಣರವರು** ಒಂದೇ ಕಂತಿನಲ್ಲಿ ರೂ. 40 ಲಕ್ಷ ಎಲ್.ಐ.ಸಿ. ವಿಮಾ ಕಟ್ಟಿಸಿರುವುದಕ್ಕೆ ಹಿರಿಯ ಅಧಿಕಾರಿಗಳಾದ ಮಂಜುನಾಥ್, ಹೆಚ್.ಕೆ. ಶಶಿಧರ್ ಹಾಗೂ ತಿಪ್ಪೇಸ್ವಾಮಿರವರಿಂದ ಅಭಿನಂದನೆಗಳು




'ಧರ್ಮ ಜಾಗರಣಾ' ವತಿಯಿಂದ ವೈದಿಕ ಬ್ರಾಹ್ಮಣರಿಗೆ, ಶುಶ್ರೂಷಕರಿಗೆ ಹಾಗೂ ಬಾಣಸಿಗರಿಗೆ ರಾಜರಾಜೇಶ್ವರಿ ನಗರದಲ್ಲಿ ಉಚಿತ ದಿನಸಿ ಕಿಟ್‌ಗಳನ್ನು ನೀಡಿದ ಸಂದರ್ಭದಲ್ಲಿ ಸಂಘದ ಸದಸ್ಯ ಶ್ರೀ **ಕೆ.ಎಸ್. ಅನಂತ್**



ಸಂಘದ ಪೋಷಕ ಶ್ರೀ **ಆರ್.ಎಸ್. ವೆಂಕಟೇಶ್,** ಕೆನರಾ ಬ್ಯಾಂಕ್‌ನ ಡೆಪ್ಯುಟಿ ಜನರಲ್ ಮ್ಯಾನೇಜರ್ ಆಗಿ ಬಡ್ತಿ ಹೊಂದಿರುತ್ತಾರೆ



50ನೇ ರಾಷ್ಟ್ರೀಯ ಸುರಕ್ಷತಾ ಉದ್ಘಾಟನಾ ದಿನದಂದು ಸಂಘದ ಸದಸ್ಯ ಶ್ರೀ **ಆರ್.ಪಿ. ಮೋಹನ್‌ರವರು** ಕಾರ್ಮಿಕ ಸಚಿವ ಶ್ರೀ ಶಿವರಾಮ ಹೆಬ್ಬಾರ್‌ರವರೊಂದಿಗೆ



ಸಂಘದ ಪೋಷಕಿ ಶ್ರೀಮತಿ ನಳಿನಿ ಸುಬ್ರಹ್ಮಣ್ಯಂರವರ ತಂದೆ-ತಾಯಿಗಳಾದ ಶ್ರೀ **ರಾಮಚಂದ್ರರಾವ್ ಹಾಗೂ ಶ್ರೀಮತಿ ಸುಲೋಚನಾ ರಾಮಚಂದ್ರರಾವ್‌ರವರು** ಸಂಘಕ್ಕೆ (ಅನ್ನದಾನ ಹಾಗೂ ವಿದ್ಯಾದಾನಕ್ಕೆ) ರೂ.60,000/- ದೇಣಿಗೆ ನೀಡಿರುತ್ತಾರೆ



**ಶ್ರೀಮತಿ ಭಾರತಿ ವಸಂತ್** (ದಿ|| ಡಿ.ಎಸ್.ವಿ. ಅಯ್ಯರ್ ಅವರ ಪುತ್ರಿ) ಕೆನರಾ ಬ್ಯಾಂಕ್‌ನ ಚೀಫ್ ಮ್ಯಾನೇಜರ್ ಆಗಿ ಬಡ್ತಿ ಹೊಂದಿರುತ್ತಾರೆ



**ಶ್ರೀ ಅನಿಲ್ ಸೇಲಂ** (ಪಂಡಿತ್ ಶೇಷಾದ್ರಿ ಗವಾಯಿರವರ ಮೊಮ್ಮಗ) ಅವರು ಅಮೆರಿಕಾದ ಸ್ಟೀವನ್ಸ್ ಯುನಿವರ್ಸಿಟಿಯಲ್ಲಿ ಎಂ.ಎಸ್. ಪದವಿ ಪಡೆದಿರುತ್ತಾರೆ



**ಮೈ.ಮಂ.ದ್ರಾ. ಬೃಹಚ್ಚರಣ ಸಂಘ**
(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)
**ಕಾರ್ಯಕಾರಿ ಸಮಿತಿ**
**ಶ್ರೀಯುತರುಗಳಾದ**
**ಬಿ. ಸುಬ್ರಹ್ಮಣ್ಯಂ, 9449869667**
ಅಧ್ಯಕ್ಷರು
**ಎಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು
**ಎಸ್.ಸಿ. ಶ್ರೀನಿವಾಸ, 9483725949**
ಕಾರ್ಯದರ್ಶಿ
**ಅರುಣ್ ವಿ., 9880166001**
ಸಹಕಾರ್ಯದರ್ಶಿ
**ಎಸ್. ಸತ್ಯನಾರಾಯಣ, 9980945699**
ಖಜಾಂಚಿ
**ಟಿ.ಪಿ. ಸೂರ್ಯನಾರಾಯಣ, 9945484268**
ಸಹಖಜಾಂಚಿ

**ಸದಸ್ಯರು**
**ಕೆ.ಜಿ. ವೆಂಕಟೇಶ್, 9964012687**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 94820 87344**
**ಟಿ.ಎಸ್. ರಮೇಶನ್, 9663874531**
**ಸರಸ್ವತಿ ನಟರಾಜನ್, 9480619730**
**ಟಿ.ಎಸ್. ನಾಗೇಶ್, 9980662118**
**ಆರ್. ಗಣೇಶ್ ಶ್ರೀಧರ್, 9880187686**
**ಮಂಜುನಾರಾಯಣ್ ಕೆ. 9886114279**
**ಅರುಣ್ ಸೇತುರಾಮ್, 9900313929**
**ಶಂಕರಪ್ರಸಾದ್ ಬಿ.ಆರ್., 9845663833**
**ನಿತಿನ್‌ಭಾಸ್ಕರ್, 9844417333**
**ಅನಂತ ಕೆ.ಎಸ್. 9740444222**

ಲೆಕ್ಕಪರಿಶೋಧಕರು
**ಬಿ.ಎನ್.ಜಿ. ಪ್ರಸಾದ್, 9845128229**

**ಗೌರವ ಸಂಪಾದಕ ಮಂಡಳಿ–ಬೃಹಚ್ಚರಣ ಪತ್ರಿಕೆ**
**ಸಂಘದ ಅಧ್ಯಕ್ಷರು, ಕಾರ್ಯದರ್ಶಿ**
**ಕೆ.ಸಿ. ನಟರಾಜನ್, 9845113475**
ಸಂಪಾದಕರು
**ಲಲಿತಾ ರಮೇಶ್, 9945199637**
ಉಪಸಂಪಾದಕಿ
**ಶಿವಕುಮಾರ್ ಎನ್., 6362337254**
ಛಾಯಾಗ್ರಾಹಕ

# ಧನ್ಯವಾದಗಳು

ಆತ್ಮೀಯರೆ,


ತಮ್ಮೆಲ್ಲರ ಸಹಕಾರದಿಂದ "ಬೃಹಚ್ಚರಣ" ತ್ರೈಮಾಸಿಕ ಪತ್ರಿಕೆಯ ಹತ್ತು ವರ್ಷಗಳ ಸುದೀರ್ಘ ನಂಟು ನನ್ನದು. ಈ ಪತ್ರಿಕೆಯು ಸಂಪಾದಕೀಯ ದಿಂದ, ನಮ್ಮ ಸಮುದಾಯದ ಸದಸ್ಯರ ಜೊತೆ ನನ್ನ ಸಂಪರ್ಕವಾಗಿ, ನನಗೆ ವಿವಿಧ ರೀತಿಯ ಪಾಠ ಕಲಿಸಿದೆ. ನನ್ನ ಮೇಲೆ ವಿಶ್ವಾಸವಿಟ್ಟು ಸಂಪಾದಕ ನನ್ನಾಗಿ ಮಾಡಿದ ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರಿಗೂ ಪ್ರೀತಿಯ ವಂದನೆಗಳು.

ಹತ್ತು ವರ್ಷಗಳ ಹಿಂದೆ ಸಂಘದ ಎರಡನೆಯ ಪರ್ವ ಶ್ರೀ ಸೋಮಸುಂದರ ಅವರ ಅಧ್ಯಕ್ಷತೆಯಲ್ಲಿ ಕಿತ್ತಿಗಾನಹಳ್ಳಿಯಲ್ಲಿ ಮತ್ತೆ ಪ್ರಾರಂಭವಾಗಿ ನಮ್ಮ ಸಮುದಾಯದ ಎಲ್ಲಾ ಕುಟುಂಬದ ಸದಸ್ಯರು ಆಗಾಗ ಸೇರಿ ಸಂಬಂಧಗಳನ್ನು ಗಟ್ಟಿಯಾಗಿಸಬೇಕೆಂಬ ಹೆಬ್ಬಯಕೆಯಿಂದ ಕಾರ್ಯಕಾರಿ ಸಮಿತಿ ಕೆಲವು ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಅದರಲ್ಲಿ ನಮ್ಮವರ ಶ್ರೇಯೋಭಿವೃದ್ಧಿ, ಪರಸ್ಪರ ಬೆಸುಗೆ, ಯುವ ಜನತೆಯ ಪ್ರತಿಭೆಗೆ ಪ್ರೋತ್ಸಾಹ, ಕಲೆ–ಸಂಸ್ಕೃತಿ–ಕಾವ್ಯ, ಹಿರಿಯರ ಪರಿಚಯ ಮುಂತಾದವುಗಳನ್ನು ಪ್ರಚುರಪಡಿಸಲು "ತ್ರೈಮಾಸಿಕ ವಾರ್ತಾ ಪತ್ರಿಕೆ" ತರಲು ತೀರ್ಮಾನಿಸಿದ್ದು ಹಿರಿಯ ಸದಸ್ಯ ಶ್ರೀ ಮಧುಸೂದನರವರ ಸಂಪಾದಕತ್ವದಲ್ಲಿ ಮೊದಲನೆ ಸಂಚಿಕೆ 28.8.2011ರಂದು ಬಿಡುಗಡೆ ಯಾಯಿತು. ನನ್ನ ಮಾಧ್ಯಮದ ಅನುಭವ ಅರಿತ ಕಾರ್ಯಕಾರಿ ಸಮಿತಿ ನನಗೆ ಸಂಪಾದಕೀಯ ಮಂಡಲಿಯಲ್ಲಿ ಜವಾಬ್ದಾರಿ ನೀಡಿತು. ಕಾರಣಾಂತರಗಳಿಂದ ಶ್ರೀ ಮಧುಸೂದನರವರು ನಿರ್ಗಮಿಸಿದ ಮೇಲೆ ಜನವರಿ 2014 ಸಂಚಿಕೆಯಿಂದ ನನಗೆ ಸಂಪಾದಕನ ಜವಾಬ್ದಾರಿಯನ್ನು ಸಮಿತಿ ನೀಡಿತು. ತಮ್ಮೆಲ್ಲರ ಸಲಹೆ, ಸಹಕಾರದಿಂದ ಉತ್ತಮವಾಗಿ ಯಾವುದೇ ಇತರ ವಾರ್ತಾಪತ್ರಿಕೆಗಳಿಗೆ ಕಡಿಮೆ ಇಲ್ಲದಂತೆ "ಬೃಹಚ್ಚರಣ" ಪತ್ರಿಕೆ ನಿಮ್ಮ ಕೈ ಸೇರಲು ನನಗೆ ಸಹಾಯಹಸ್ತ ನೀಡಿದ ಪ್ರತಿಯೊಬ್ಬರಿಗೂ ಧನ್ಯವಾದಗಳು.

ನನಗೀಗ 76 ವರ್ಷಗಳು ತುಂಬಿದ್ದು, ಸಂಪಾದಕನ ಜವಾಬ್ದಾರಿ ಯನ್ನು ಮತ್ತೊಬ್ಬರಿಗೆ ಹಸ್ತಾಂತರಿಸಲು ತೀರ್ಮಾನಿಸಿ, ಸಂಘದ ಹಿರಿಯ ಪದಾಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಅಂತಹವರು ಸಂಪಾದಕರಾಗಿ ಮುಂದುವರೆಯಲು ಒಪ್ಪಿದ ನಂತರ "ಬೃಹಚ್ಚರಣ" ಪತ್ರಿಕೆ ಸುಂದರವಾಗಿ ಮೂಡಿ ಬರಲು ಪ್ರಯತ್ನಿಸುತ್ತಾರೆಂದು ನನಗೆ ನಂಬಿಕೆ ಇದೆ.

ನನ್ನೊಂದಿಗೆ ಬೃಹಚ್ಚರಣ ಪತ್ರಿಕೆಗೆ ಸಹಕಾರ ನೀಡುತ್ತಿರುವ ಆರ್. ರಮೇಶ್ ಅವರನ್ನು ಸಂಪಾದಕರಾಗಲು ಸೂಚಿಸಿದ್ದೇನೆ. ಕಾರ್ಯಕಾರಿ ಸಮಿತಿಯು ಇದರ ಬಗ್ಗೆ ತೀರ್ಮಾನ ಕೈಗೊಳ್ಳುವುದು.

ಬೃಹಚ್ಚರಣ ಪತ್ರಿಕೆಯಲ್ಲಿ ನನಗೆ ಸೇವೆ ಸಲ್ಲಿಸಲು ಅನುವು ಮಾಡಿಕೊಟ್ಟ ಪ್ರತಿಯೊಬ್ಬರಿಗೂ ಮತ್ತೊಮ್ಮೆ ನನ್ನ ಧನ್ಯವಾದಗಳು.



◆ **ಕೆ.ಸಿ. ನಟರಾಜನ್**
ಸಂಪಾದಕ



## ನಾಗಾರಾಧನೆ ಆಚರಣೆಯ ಮೂಲ ಹಿನ್ನೆಲೆ

ನದಿಯ ಮೂಲ, ಋಷಿ ಮೂಲ, ಸ್ತ್ರೀ ಮೂಲಗಳನ್ನು ಹುಡುಕಬಾರದು ಎಂಬ ಆಡು ಮಾತಿದೆ. ಹಾಗೇಯೇ ಸಮಾಜದಲ್ಲಿ ಅನೇಕ ಸಮುದಾಯ, ಕುಟುಂಬಗಳಲ್ಲಿನ ತಲಮಾರುಗಳಿಂದ ಆಚರಿಸಿಕೊಂಡು ಬರುವ ಪದ್ಧತಿಗಳು, ವಿವಿಧ ದೇವತಾ ಆರಾಧನೆ, ಆಚರಣೆಗಳ ಬಗ್ಗೆ ಪ್ರಮಾಣ ಪಡಿಸುವ ದಾಖಲೆಗಳು, ಶಾಸನಗಳು ಇಲ್ಲ ಎಂಬ ಕಾರಣದಿಂದ ಅವುಗಳ ಮೂಲವನ್ನು ಕೆದಕುವ ಕೆಲಸ ಅನವಶ್ಯಕ.

ಆದರೆ ನಮ್ಮ ಹಿಂದಿನ ತಲೆಮಾರಿನವರು ಆಚರಿಸಿಕೊಂಡು ಬರುತ್ತಿದ್ದ ಕೆಲವು ದೇವತಾ ಆಚರಣೆ, ಪದ್ಧತಿಗಳನ್ನು ನಾವೂ ಮುಂದುವರೆಸಿಕೊಂಡು ಹೋಗುವುದರಿಂದ ನಮಗೆ ನಷ್ಟವೇನೂ ಇಲ್ಲ. ಬದಲಿಗೆ ದೇವತಾ ಆಚರಣೆಗಳಿಂದ ಕುಟುಂಬದ ಸದಸ್ಯರ ಮನಸ್ಸಿಗೆ ನೆಮ್ಮದಿ, ಶಾಂತಿ ದೊರೆತೀತು.

ಇಲ್ಲಿ ಮುಖ್ಯವಾಗಿ ಶತಮಾನಗಳ ಹಿಂದಿನ ಕಾಲದಲ್ಲಿ, ಇಂದಿನಂತೆ ಅಂಚೆಯ ಮೂಲಕ ಪತ್ರ ವ್ಯವಹಾರ, ದೂರವಾಣಿ, ಮೊಬೈಲ್ ಇಲ್ಲದ ಮತ್ತು ಮತ್ತಾವುದೇ ವಿಚಾರ ವಿನಿಮಯ ಮಾಡಿಕೊಳ್ಳಲು ಇತರೆ ಮಾರ್ಗಗಳಿಲ್ಲದ ಕಾಲದಲ್ಲಿ, ತಮ್ಮ ವಿಚಾರ ವಿಷಯಗಳನ್ನು ವಿನಿಮಯ ಮಾಡಿಕೊಳ್ಳಲು ಇದ್ದ ಏಕೈಕ ಮಾರ್ಗ ಮುಖಾಮುಖಿ ಭೇಟಿಯೊಂದೆ. ಹಾಗಾಗಿ, ಇಂತಹ ಸಮುದಾಯಗಳ ಅಥವಾ ಕುಟುಂಬಗಳಿಗೆ ಸೀಮಿತವಾದ ಆಚರಣೆಗಳ ವೇಳೆಯಲ್ಲಿ ತಮ್ಮ ಬಂಧು ಭಾಂಧವರನ್ನು ಒಟ್ಟಾಗಿ ಭೇಟಿಯಾಗಲು ಅವಕಾಶವೂ ದೊರೆತಂತಾಗುತ್ತಿತ್ತು.

ನಮ್ಮ 'ಬೃಹಚ್ಚರಣ' ಸಮುದಾಯದ ಕೆಲವು ಕುಟುಂಬದವರು ತಲಮಾರುಗಳಿಂದ ಆಚರಿಸಿಕೊಂಡು ಬರುತ್ತಿರುವ ದೇವತಾ ಆಚರಣೆಯು "ನಾಗಾರಾಧನೆ". ಪ್ರತಿವರ್ಷ ಫಾಲ್ಗುಣ ಶುದ್ಧ ಪಂಚಮಿಯಂದು ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ 'ನಾಗಪ್ಪನಿಗೆ' ತನಿ ಎರೆಯುವ ಸಾಂಪ್ರದಾಯಿಕ ಪದ್ಧತಿ ಶತಮಾನಗಳಿಂದ ಇಂದಿಗೂ ಮುಂದುವರೆಯುತ್ತಿರುವುದು ಒಂದು ವಿಶೇಷವೇ ಸರಿ.

ಕಿತ್ತಿಗಾನಹಳ್ಳಿಯ ನಾಗಾರಾಧನೆಯ ಪ್ರಾರಂಭದ ಕಾಲಮಾನ ಎಂದಿನದು, ಯಾವಾಗಿನಿಂದ ಎಂಬ ಬಗ್ಗೆ ನಮ್ಮಲ್ಲಿ ನಿಖರವಾದ ಮಾಹಿತಿ ಇಲ್ಲ. ಇದು ಕೇವಲ ತಲೆಮಾರುಗಳಿಂದ ಅನುವಂಶೀಯವಾಗಿ, ಅನೂಚಾನವಾಗಿ ನಡೆದುಕೊಂಡು ಬರುತ್ತಿರುವ ಆಚರಣೆ.

ಒಂದು ಅಂದಾಜಿನ ಪ್ರಕಾರ ಸುಮಾರು ಏಳನೂರು ವರ್ಷಗಳ ಹಿಂದೆ ತಮಿಳುನಾಡಿನ ಮಂಜಪತ್ತೂರು ಪ್ರಾಂತ್ಯದಿಂದ ಕಿತ್ತಿಗಾನಹಳ್ಳಿಗೆ ವಲಸೆ ಬಂದ ಬೃಹಚ್ಚರಣ ಸಮುದಾಯದ ಸಂಪ್ರದಾಯಸ್ಥ ಕುಟುಂಬ ಇಲ್ಲಿ ನೆಲೆಯೂರಿತು. ಆ ಬ್ರಾಹ್ಮಣ ದಂಪತಿಗಳಿಗೆ ಸಂತಾನ ಪ್ರಾಪ್ತಿಯಾಗಿರಲಿಲ್ಲ. ಹಿರಿಯ ಪಂಡಿತರು 'ನಾಗ ಪ್ರತಿಷ್ಠೆ' ಮಾಡಿದಲ್ಲಿ ಸಂತಾನ ಪ್ರಾಪ್ತಿಯಾದೀತು ಎಂಬ ಸಲಹೆಯಂತೆ ನಾಗ ಪ್ರತಿಷ್ಠೆ ಮಾಡಿದ ನಂತರ, ಆ ಬ್ರಾಹ್ಮಣನ ಪತ್ನಿ ಗರ್ಭವತಿಯಾಗಿ, ನವಮಾಸಗಳು ತುಂಬಿದ ಬಳಿಕ ಅವಳಿ ಜವಳಿ ಮಕ್ಕಳಿಗೆ ಜನ್ಮಕೊಟ್ಟಳು. ವಿಶೇಷವೋ ವಿಪರ್ಯಾಸವೋ ಎನ್ನುವಂತೆ ಅವಳಿ–ಜವಳಿ ಮಕ್ಕಳಲ್ಲಿ ಒಂದು ಮಗುವು ಬಹುತೇಕ ಸರ್ಪದ ಆಕಾರದಲ್ಲಿ ಜನಿಸಿತ್ತು.

ಕೆಲವು ಕಾಲದ ನಂತರ, ಪ್ರಾಪ್ತ ಸಮಯದಲ್ಲಿ ಆ ಅವಳಿ ಜವಳಿಯ ಗಂಡು ಮಗುವಿಗೆ ಉಪನಯನ ಕಾರ್ಯಕ್ಕೆ ಸಿದ್ದತೆ ನಡೆದು, ಉಪನಯನದ ಮುಹೂರ್ತವು ಪಾಲ್ಗುಣ ಶುದ್ಧ ಪಂಚಮಿಯ ದಿನವಾಗಿತ್ತು. ಅಂದು, ಆ ದಂಪತಿಗಳು ತಮ್ಮ ಆ ಸರ್ಪದ ಆಕಾರದ ಮತ್ತೊಂದು ಮಗುವನ್ನು ಉಪನಯನ ಕಾರ್ಯಕ್ಕೆ ಬಂದ ಅತಿಥಿಗಳು, ನೆಂಟರು, ಇಷ್ಟರು, ಬಂಧುಗಳು ನೋಡಿದಾಗ ಭಯಪಡಬಹುದು, ಎಂದು ಆಲೋಚಿಸಿ, ಆ ಮಗುವನ್ನು ಭೋಜನ ತಯಾರಿಸುವ ಪಾಕಶಾಲೆ (ದನದ ಕೊಟ್ಟಿಗೆ)ಯ ಒಂದು ಮಗ್ಗುಲಲ್ಲಿ ಮಲಗಿರಲು ಹೇಳಿದರು. ತಂದೆ ತಾಯಂದಿರ ಮಾತಿನಂತೆ ಅದು ಒಂದು ಮೂಲೆಯಲ್ಲಿ ಗುಂಡಾಗಿ ಸುತ್ತಿಕೊಂಡು ಮಲಗಿತು.

ಉಪನಯನದ ಕಾರ್ಯಕ್ರಮಗಳು ಮುಂದುವರೆದಿದ್ದವು. ಭೋಜನ ತಯಾರಿಸುವ ಬಾಣಸಿಗರು ತಮ್ಮ ಪಾಡಿಗೆ ಖಾದ್ಯ ಪದಾರ್ಥಗಳನ್ನು ತಯಾರಿಸುವ ಕಾರ್ಯಗಳಲ್ಲಿ ತೊಡಗಿದ್ದರು.

**ಆಗ ಅಲ್ಲೊಂದು ಅಚಾತುರ್ಯ ನಡೆದೇ ಹೋಯಿತು!**

ಅತಿಥಿ ಸತ್ಕಾರಕ್ಕಾಗಿ ಖಾದ್ಯ ಪದಾರ್ಥಗಳನ್ನು ತಯಾರಿಸುತ್ತಿದ್ದ ಬಾಣಸಿಗನು, ಕುದಿಯುತ್ತಿದ್ದ ಪಾಯಸದ ಪಾತ್ರೆಯನ್ನು ಕೆಳಗಿಳಿಸಿ ಅಲ್ಲಿ ಗುಂಡಾಗಿ ಸುತ್ತಿಕೊಂಡು ಮೂಲೆಯಲ್ಲಿ ಮಲಗಿದ್ದ ಆ ಸರ್ಪದ ಮೇಲೆ ಅರಿವಿಲ್ಲದೆ ಇಳಿಸಿಯೇ ಬಿಟ್ಟ. ಆ ಪಾಯಸದ ಪಾತ್ರೆಯ ಶಾಖದಿಂದ ಕೆಲವೇ ಕ್ಷಣಗಳಲ್ಲಿ ಆ ಸರ್ಪದ ಆಕಾರದ ಮಗುವು ಮೃತಪಟ್ಟಿತು.

ಉಪನಯನದ ಶುಭ ಕಾರ್ಯದ ಸಂದರ್ಭದಲ್ಲಿ ಉಂಟಾದ ಆಕಸ್ಮಿಕ ಅವಗಢದಿಂದ ಶುಭಕಾರ್ಯದ ಮನೆಯು ಸೂತಕದ ಮನೆಯಾಯಿತು.

ಇದರಿಂದ ಮನನೊಂದ ಆ ದಂಪತಿಗಳು ತಮ್ಮ ದೋಷ ಪರಿಹಾರಕ್ಕಾಗಿ ಪಂಡಿತರ ಮಾರ್ಗದರ್ಶನದಂತೆ ಅಂದಿನಿಂದ ಪ್ರತಿ ವರ್ಷವೂ ಶ್ರಾದ್ಧ ಕರ್ಮಗಳ ವಿಧಿವಿಧಾನದಂತೆ 'ನಾಗಾರಾಧನೆ' ಆಚರಣೆಯು ಪ್ರಾರಂಭವಾಯಿತು ಎಂಬುದು ಪ್ರತೀತಿ.

ಆ ಬೃಹಚ್ಚರಣ ಸಂಪ್ರದಾಯಸ್ಥ ಕುಟುಂಬದವರು ಕೌಂಡಿಣ್ಯ ಗೋತ್ರಕ್ಕೆ ಸೇರಿದವರಾದ್ದರಿಂದ, ಅವರ ಸಂತತಿಯವರು ತಮ್ಮನ್ನು ಹಾಗೂ ತಮ್ಮ ಮುಂದಿನ ಪರಿವಾರಗಳನ್ನು ಯಾವುದೇ ದೋಷಗಳು ಕಾಡದಿರಲಿ ಎಂಬ ಕಾರಣದಿಂದಾಗಿ ಈ 'ನಾಗಾರಾಧನೆಯ' ಆಚರಣೆಯನ್ನು ಇಂದಿಗೂ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ.

**ನಾಗಾರಾಧನೆಯ ಆಚರಣೆಯ ಕ್ರಮ**

ಪ್ರತಿ ವರ್ಷ ಫಾಲ್ಗುಣ ಮಾಸದ ಶುದ್ಧ ಪಂಚಮಿಯಂದು ಬೃಹಚ್ಚರಣ ಸಮುದಾಯದ ಕೆಲವು ಕುಟುಂಬದವರು ತಮ್ಮ ಹಿಂದಿನ ತಲೆಮಾರಿನವರ ಕುಟುಂಬದಲ್ಲಿ ಉಂಟಾದ ಆಕಸ್ಮಿಕ 'ನಾಗರ ಹತ್ಯೆ'ಯ ದೋಷದಿಂದ ಮುಕ್ತಿ ಪಡೆಯಲು ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದ ನಾಗಾರಾಧನೆಯಲ್ಲಿ ನಾಗಪ್ಪನಿಗೆ 'ತನಿ' ಎರೆಯುವ ಪದ್ಧತಿಯುಂಟು.

ಆ ಕುಟುಂಬಗಳವರು ಅಂದು ಶ್ರಾದ್ಧ ಕರ್ಮಗಳನ್ನು ಆಚರಿಸುವ ವಿಧಿವಿಧಾನಗಳಂತೆ ಉಪವಾಸವಿದ್ದು, ಶುಭ್ರವಾದ ಸಾಂಪ್ರದಾಯಿಕ ಉಡುಗೆಯಲ್ಲಿ, ಅನುಕೂಲವಾದಲ್ಲಿ ಒದ್ದೆ ಬಟ್ಟೆಯುಟ್ಟು ನಾಗಪ್ಪನಿಗೆ ನೀರು, ಅರಿಶಿನ, ಕುಂಕುಮ, ಹಸಿಯಾದ ಹಸುವಿನ ಹಾಲು, ಹೂವು, ಹಣ್ಣು ಮುಂತಾದ ಮಂಗಳ ದ್ರವ್ಯಗಳೊಂದಿಗೆ ತನಿ ಎರೆದು, ನಾಗಪ್ಪನಿಗೆ ವಸ್ತ್ರವನ್ನು ತೊಡಿಸಿ, ನಂತರ ಶುಚಿರ್ಭೂತನಾದ ವಟುವಿಗೆ ಕಾಲು ತೊಳೆದು ಆ ವಸ್ತ್ರವನ್ನು ನೀಡಿ, ಯಥಾಶಕ್ತಿ ದಕ್ಷಿಣೆ ನೀಡಿ ನಮಸ್ಕರಿಸಬೇಕು. ವಿಶೇಷವಾಗಿ ಅಂದು ಹುರಿಯದೆ ಇರುವ ಹಸಿಯಾದ ಕರಿಎಳ್ಳು, ಬೆಲ್ಲದಿಂದ ಮಾಡಿದ 'ಚಿಗಳಿ' ಉಂಡೆ, ತಂಬಿಟ್ಟು ನೈವೇದ್ಯ ಮಾಡುವುದು ಆಚರಣೆಯ ಕ್ರಮ.

ನಂತರ ಬಹುಪಾಲು ಶ್ರಾದ್ಧ ಕರ್ಮಗಳಲ್ಲಿ ಮಡಿಯಿಂದ ತಯಾರಿಸುವ ಪದಾರ್ಥಗಳಾದ ಉದ್ದಿನ ವಡೆ, ಪಾಯಸ, ಗೊಜ್ಜು, ಪಲ್ಯಗಳನ್ನು ಮಾಡಿ ಭೋಜನ ಮಾಡಬೇಕು. ಅಂದಿನ ರಾತ್ರಿಯಲ್ಲಿ ಲಘುವಾದ ಉಪಹಾರ ಸೇವಿಸಬೇಕು.

**ನಾಗೇಶ್ವರ ಕ್ಷೇತ್ರದ ಅಶ್ವತ್ಥ ವೃಕ್ಷ**

ತಲೆಮಾರುಗಳಿಂದ ಒಬ್ಬರಿಂದ ಮತ್ತೊಂದು ತಲೆಮಾರಿನವರಿಗೆ ಕೇವಲ ವಾಕ್ ಮೂಲಕ ಹಂಚಿಕೊಂಡ ಮಾಹಿತಿಯಂತೆ, ಈಗಿರುವ ಅಶ್ವತ್ಥ ಮರವನ್ನು ಮಂಜಪತ್ತೂರಿನಿಂದ ಕಿತ್ತಿಗಾನಹಳ್ಳಿಗೆ ಬಂದು ನೆಲೆಸಿದ ಆ ಬೃಹಚ್ಚರಣ ದಂಪತಿಗಳು ಪುತ್ರ ಸಂತಾನದ ಭಾಗ್ಯಕ್ಕಾಗಿ 'ನಾಗ ಪ್ರತಿಷ್ಠೆ' ಮಾಡಿದ ಸಮಯದಲ್ಲಿ ಅಶ್ವತ್ಥಗಿಡ ನೆಟ್ಟು ಬೆಳೆಸಿದ್ದು ಎಂಬುದಾಗಿ ತಿಳಿದುಬರುತ್ತದೆ. ಮರದ ಕಾಂಡದ ಗಾತ್ರವನ್ನು ಗಮನಿಸಿದಾಗ, ಅಂದಾಜಿನ ಪ್ರಕಾರವೂ ಅದು ನಿಜವಿರಬಹುದು ಎನಿಸುತ್ತದೆ. ಇಲ್ಲಿರುವ ಬೃಹದಾಕಾರದ ಮರದ ವಯಸ್ಸು ಎಷ್ಟಾಗಿರಬಹುದು ಎಂಬುದನ್ನು ವೈಜ್ಞಾನಿಕವಾದ ಲೆಕ್ಕವನ್ನು ಗಣನೆಗೆ ತೆಗೆದುಕೊಳ್ಳಲು ಭಾರತ ಸರ್ಕಾರದ ``Institute of wood science technology, Malleswaram, Bangalore." ಸಂಸ್ಥೆಯ ಪರಿಣಿತ ವಿಜ್ಞಾನಿಗಳಿಂದ ಅಧ್ಯಯನ ನಡೆಸಿ, ವರದಿ ಪಡೆದುಕೊಂಡಲ್ಲಿ, ಈ ಮರದ ಅಂದಾಜಿನ ವಯಸ್ಸು ತಿಳಿಯುವ ಸಾಧ್ಯತೆ ಇದೆ.




ಈ ಅಧ್ಯಯನದಿಂದ ನಮ್ಮ ಸಾಂಪ್ರದಾಯಿಕ ಆಚರಣೆಯಾದ ನಾಗಾರಾಧನೆಗೆ ಯಾವುದೇ ತೊಡಕು ಅಥವ ಗೊಂದಲ ಉಂಟಾಗದು. ಈ ಅಶ್ವತ್ಥ ಮರದ ಅಂದಾಜು ವಯಸ್ಸು ತಿಳಿಯುವುದರಿಂದ ನಾಗಾರಾಧನೆಯ ಪ್ರಾರಂಭದ ಕಾಲವು ನಮಗೆ ಸ್ಥೂಲವಾಗಿಯಾದರೂ ತಿಳಿದೀತು ಎಂಬುದಷ್ಟೇ ಈ ವೈಜ್ಞಾನಿಕ ಅಧ್ಯಯನದ ಪ್ರಮುಖ ಉದ್ದೇಶ.

*(10ನೇ ಪುಟದಲ್ಲಿ ಮುಂದುವರೆದಿದೆ......)*

# ಅನ್ನದಾನಕ್ಕೆ ದೇಣಿಗೆ ನೀಡಿದ ದಾನಿಗಳು

ಶ್ರೀಯುತರು

| | | | | | |
|---|---|---|---|---|---|
| ಕೆ. ರಾಜಣ್ಣ | 1,000.00 | ಶೇಷದಾರಿ ಬಿ.ವಿ. | 500.00 | ನಾಗರಾಜು ಕೆ.ಟಿ. | 1,000.00 |
| ಅನಂತ್ ಎಚ್.ಜಿ. | 500.00 | ವಿಶ್ವಾಸ್ ಕೌಂಡಿನ್ಯ ಆರ್.ಎಚ್. | 200.00 | ಯಶಸ್ವಿನಿ ಕೆ.ಎಸ್. | 500.00 |
| ಟಿ.ಎಸ್. ಕೃಷ್ಣನ್ | 1,002.00 | ಅಶೋಕ್ ಕುಮಾರ್ ಜಿ. | 500.00 | ಶುಭ ಗಾಯತ್ರಿ | 2,500.00 |
| ಆರ್.ಎಸ್. ವೆಂಕಟೇಶ್ | 2,100.00 | ಕೃಷ್ಣ ಎಸ್. | 1,200.00 | ವೆಂಕಟೇಶ್ ಎಚ್. | 500.00 |
| ಸತ್ಯಮೂರ್ತಿ ಜಿ.ಎಸ್. | 500.00 | ಶ್ಯಾಮ್‌ಸುಂದರ್ ಆರ್.ಎ. | 500.00 | ಲಕ್ಷ್ಮೀಕಾಂತ್ ಕೆ.ವಿ. | 50.00 |
| ಇಂದಿರಾ ಜಿ.ಎಸ್. | 500.00 | ಶಾಂತಕುಮಾರಿ | 500.00 | ರಾಮು ನಟರಾಜ್ | 500.00 |
| ಶ್ರೀನಿವಾಸ್ ಆನಂದ್ | 500.00 | ನರಸಿಂಹ ವಿ. | 2,000.00 | ರವಿಶಂಕರ್ ಕೆ.ವಿ. | 500.00 |
| ಟಿ.ಪಿ. ಜಗನಾಥ್ | 500.00 | ಸಾವಿತ್ರಿ (ನರೇಂದ್ರ) | 3,000.00 | ರತ್ನಮ್ಮ ಬಾಣಸವಾಡಿ | 1,000.00 |
| ಕೆ.ಸರಸ್ವತಿ | 1,010.00 | ವೆಂಕಟಸುಬ್ಬು | 500.00 | ರವಿಶಂಕರ್ ಆರ್.ಪಿ. | 1,000.00 |
| ಭ್ರಮರಾಂಬ ಗೋಪಿನಾಥ | 500.00 | ನಾಗರತ್ನ | 2,000.00 | ಕಿರಣ್ ಪಾರ್ಥಸಾರಥಿ | 2,001.00 |
| ಜಯರಾಮ್ ಕೆ.ಸಿ. | 100.00 | ರವಿಶಂಕರ್ ಆರ್.ಎಸ್. | 1,001.00 | ಆರ್.ಎನ್. ನಾರಾಯಣ್‌ರಾವ್ | 1,002.00 |
| ಲಕ್ಷ್ಮಿನಾರಾಯಣ್ ಕೆ.ಆರ್. | 110.00 | ಗಿಣಿ ಕೆ.ಆರ್. | 250.00 | ಉಮಾ ಜಯರಾಮ್ | 1,000.00 |
| ವಿಜಯ್ ಕುಮಾರ್ ಎಂ.ಆರ್. | 520.00 | ಲಕ್ಷ್ಮಿನಾರಾಯಣ್ ಕೆ.ಆರ್. | 1,000.00 | ಚಂದ್ರಿಕಾ | 502.00 |
| ಅಜಯ್ ಕುಮಾರ್ ಎನ್. | 2,500.00 | ರಾಮ್‌ಪ್ರಸಾದ್ ನಾಗಮಣಿ | 200.00 | ದೀಪಿಕಾ ರಾಜೇಶ್ | 101.00 |
| ಶಶಿಧರ ಎಚ್.ಕೆ. | 200.00 | ಶಾಂತಮ್ಮ | 500.00 | ನಾಗರತ್ನ ಶ್ರೀಧರ್ | 502.00 |
| ಉಮಾ ಗೋವಿಂದ | 1,000.00 | ಉಮಾ ಜಯರಾಮ್ | 2,000.00 | ರಾಜಲಕ್ಷ್ಮಿ ಶಂಕರ್ | 101.00 |
| ಮೀನಾಕ್ಷಿ ವೆಂಕಟಸುಬ್ಬಯ್ಯ | 1,000.00 | ಲಕ್ಷ್ಮಿದೇವಿ ಜಿ.ಪಿ. | 500.00 | ಗಾಯತ್ರಿ ಸತ್ಯನಾರಾಯಣ | 102.00 |
| ವೆಂಕಟೇಶ್ ಜಿ.ಎಸ್. | 1,050.00 | ವಸಂತ ಕುಮಾರಿ | 500.00 | ಆರ್.ಕೆ. ಲಕ್ಷ್ಮಿ | 102.00 |
| ಶಾಂತ ಲಕ್ಷ್ಮಿನಾರಾಯಣ್ | 1,000.00 | ಶಿವಕುಮಾರ್ ಕೆ.ಎಸ್. | 500.00 | ವೀಣಾ ವೆಂಕಟೇಶ್ | 102.00 |
| ಪಾರ್ವತಿ ರಾಧಾಕೃಷ್ಣ | 500.00 | ಡಾ. ಶಶಿಕುಮಾರ್ ಎಂ.ಎಸ್. | 500.00 | ಸುಮನ್ ಸತ್ಯನಾರಾಯಣ | 500.00 |
| ಸುಧಾ | 500.00 | ಬಾಲಸುಬ್ರಮಣಿ ಜಿ.ವಿ. | 1,500.00 | ಆರ್.ಎಸ್. ರಮೇಶ್ | 2000.00 |
| ಶ್ರೀನಿವಾಸರಾವ್ | 500.00 | ಗಾಯತ್ರಿದೇವಿ ಎಂ. | 500.00 | ಬಿ.ಎಸ್. ಸೂರ್ಯನಾರಾಯಣ | 3000.00 |
| ಡಾ. ಎಸ್. ರಮಾದೇವಿ. | 1,000.00 | ಶ್ರೀನಿವಾಸನ್ ಸರ್ಜಾಪುರ | 150.00 | ವೈಜಯಂತಿ | 10,000.00 |
| ಅಂಬಾ ನಡವತ್ತಿ | 1,000.00 | ಗಣಪತಿ ವೈ.ಆರ್. | 100.00 | ರೇವತಿ ಚಂದ್ರಶೇಖರ್ | 5000.00 |
| ಸುಂದರ್ ನಡವತ್ತಿ ಎನ್.ವಿ. | 500.00 | ಅಶ್ವಥ್ ರಾಜರಾಂ | 500.00 | ಶಾರದಾ | 5000.00 |

## ಸಂಘಕ್ಕೆ ವಾರ್ಷಿಕ ನಿರ್ವಹಣಾ ವೆಚ್ಚ ರೂ. 500/– ನೀಡಿರುವ ಸದಸ್ಯರು

ಶ್ರೀಯುತರು


| | | | | |
|---|---|---|---|---|
| ತಾರಾ ರವೀಂದ್ರ | ಶುಭ ಗಾಯತ್ರಿ | ಶ್ಯಾಮ್ ಸುಂದರ್‌ಆರ್.ಎ. | ಡಾ. ಶಶಿಕುಮಾರ್ ಎಂ.ಎಸ್. | ಪರಿಮಳಾ ಎಸ್.ಸಿ. |
| ರಾಮ ಸುಬ್ಬರಾವ್ | ರಾಧಾ ನಾಗರಾಜ್ | ನರಸಿಂಹ ವಿ. | ಶ್ರೀನಿವಾಸನ್ ಎಸ್. | ಸುಮನ್ ಜಿ. ಕೃಷ್ಣ |
| ಲತಾ ಎಸ್.ಆರ್. | ಮುರಳಿ ಕೃಷ್ಣ ಸಿ. | ಗೋಪಾಲಕೃಷ್ಣ ಆರ್. | ಗಣಪತಿ ವೈ.ಆರ್. | ಸುಂದರ್ ನಡವತ್ತಿ ಎನ್. |
| ರೂಪ ವಿಶ್ವೇಶ್ | ಭ್ರಮರಂಬ ಗೋಪಿನಾಥ | ವಿಶ್ವನಾಥ ಎಸ್. | ಗಾಯತ್ರಿ ದೇವಿ ಎಂ. | ಆರ್.ಎಸ್. ರಮೇಶ್ |
| ಶರತ್ ಕಶ್ಯಪ್ | ಜಯರಾಮ ಕೆ.ಸಿ. | ಸುಮಿತ್ರಮ್ಮ | ಶೈಲೇಶ್ | ಅಶ್ವಥ್ ರಾಜಾರಾವ್ |
| ಅನಂತ್ ಎಚ್.ಜಿ. | ಅರುಣ್ ಜೆ. ಕಾರ್ತಿಕ್ | ಮುರುಳೀಧರ ಆರ್.ವಿ. | ಬಾಲಸುಬ್ರಹ್ಮಣಿ ಜಿ.ವಿ. | ಸುಬ್ರಹ್ಮಣ್ಯಂ ಬಿ. |
| ಚಂದ್ರಶೇಖರ್ ಕೆ. (ಗೌರಮ್ಮ) | ಸತ್ಯನಾರಾಯಣ ಎಂ.ಆರ್. | ಹನುಮಂತು ಕೆ. | ಶ್ರೀನಿವಾಸನ್ ಎಸ್. | ನಳಿನಿ ಎಸ್. |
| ಕೆ.ಸಿ. ನಟರಾಜನ್ | ಲಕ್ಷ್ಮಿನಾರಾಯಣ್ ಕೆ.ಆರ್. | ಶೇಷಾದ್ರಿ ಎಸ್.ವಿ. | ವೆಂಕಟೇಶ್ ಎ. | ಶಶಿಧರ್ ಹೆಚ್.ಕೆ. |
| ಸರಸ್ವತಿ ನಟರಾಜನ್ ಕೆ.ಸಿ. | ಉಮಾ ಗೋವಿಂದ | ಸುಂದರ್ ಕೆ.ಜಿ. | ವೆಂಕಟೇಶ್ ಎಚ್. | ಎಸ್. ಸತ್ಯನಾರಾಯಣ |
| ಶಿವಕುಮಾರ್ ಎನ್. | ವೆಂಕಟೇಶ್ ಪ್ರಸಾದ್ ಆರ್. | ಉಮಾ ಜಯರಾಮ್ | ರವಿಶಂಕರ್ ಕೆ.ವಿ. | ಮಣಿ ಗುಂಜೂರು |
| ಮಮತಾ ಶಿವಕುಮಾರ್ | ಶ್ರೀಕಾಂತ್ ಆರ್.ಎ. | ಶಿವಕುಮಾರ್ ಕೆ.ಎಸ್. | ರಾಮಕೃಷ್ಣ ವಿ. | |

### ಸದಸ್ಯರು ಕೈಪಿಡಿ ಜಾಹಿರಾತಿಗಾಗಿ ನೀಡಿರುವ ಮೊಬಲಗು

| | | | | | | | |
|---|---|---|---|---|---|---|---|
| ಅನಂತ್ ಎಚ್.ಜಿ. | 1000 | ಎಸ್. ಸತ್ಯನಾರಾಯಣ | 2000 | ರಮೇಶ್ ರಾಮಚಂದ್ರ | 1000 | ಬಿ.ಎಸ್. ಸೂರ್ಯನಾರಾಯಣ | 1000 |
| ಡಾ. ರಮಾ ದೇವಿ ಎಸ್. | 1000 | ಕೆ. ಮಂಜುನಾರಾಯಣ್ | 2000 | ಸುಧೀಂದ್ರ | 2000 | ಟಿ.ಪಿ. ಸೂರ್ಯನಾರಾಯಣ | 1000 |
| ಚಂದ್ರಶೇಖರ್ ಎಸ್. | 1000 | ಟಿ.ಎಸ್. ಕೃಷ್ಣನ್ | 1000 | ದಕ್ಷಿಣಾಮೂರ್ತಿ ಆರ್.ಎ. | 2000 | ನಾಗರಾಜ್ ಎನ್. | 1000 |
| ಆರ್.ಎಸ್. ರಮೇಶ್ | 2000 | ಸಿಟಿ ಸ್ಟೇಷನರಿ | 1000 | ಕೆ. ಗುಂಡಪ್ಪ | 1000 | ಪ್ರಭಾಕರ್ ನಟರಾಜ್ | 2000 |
| ಹೆಚ್.ಕೆ. ಶಶಿಧರ್ | 1000 | ಉಮೇಶ್ | 1000 | ವಿ. ಅರುಣ್ | 2000 | ಬಿ.ಸಿ. ನಟರಾಜ್ | 2000 |
| | | | | ಎಸ್.ಸಿ. ಶ್ರೀನಿವಾಸ | 1000 | ಟಿ.ಎನ್. ರಘು | 1000 |

ಸುದ್ದಿ ಮನೆ

## ಷಷ್ಠಿಪೂರ್ತಿ ಶಾಂತಿ



ಸಂಘದ ಸದಸ್ಯ ಶ್ರೀ ಆರ್.ಎನ್. ಮಂಜುನಾಥ



ಸಂಘದ ಸದಸ್ಯ ಎಸ್. ನಿರಂಜನ್

**ಹುಂಡಿಯಿಂದ ಸಂಗ್ರಹವಾದ ಹಣ**

| | | | |
|---|---|---|---|
| ವೆಂಕಟೇಶ್ ಎ. | 1000 | ಪದ್ಮ ಗಂಗಾಧರ್ | 1000 |
| ಸುಬ್ಬರಾವ್ ಎ.ಆರ್. | 1100 | ಯಲ್ಲಮ್ಮ (ಹಿತೈಷಿ) | 775 |
| ತಾರಾ ರವೀಂದ್ರ | 1140 | ಸುಬ್ರಹ್ಮಣ್ಯಂ ಬಿ. | 1620 |
| ಲತಾ ಎಸ್.ಆರ್. | 735 | ಡಾ. ಜಿ. ಸ್ವಾಮಿನಾಥನ್ | 1525 |
| | | ಕುಪ್ಪುಸ್ವಾಮಿ | 301 |

## ಪ್ರಾರ್ಥನೆ

ರಾಗ: ಬೃಂದಾವನ ಸಾರಂಗ ತಾಳ: ಧೃತ್ ಏಕ್ ತಾಳ್

ಸ್ಥಾಯಿ

ಶಾಂತಿ ಧರ್ಮ ಪಾಲಿಪ ಸಂಕಲ್ಪವ ಧರಿಸೋ ಮನದೆ।
ನೀತಿ ಎಂಬ ತಾರಕ ಮಂತ್ರವ ಜಪಿಸೋ ಅನುದಿನದೇ ॥

ಅಂತರ

ಭ್ರಾಂತಿಯ ಬಿಡು ಹೃದಯವನು ಪ್ರಶಾಂತದೊಳಿರಿಸೋ ನರನೆ।
ಪ್ರೀತಿಯಿಂದ ಪೂಜಿಸು ಶ್ರೀ ಉರಗಾಚಲವಾಸ ಹರಿಯ ॥

ಪಂಡಿತ ಶೇಷಾದ್ರಿ ಗವಾಯಿ

## ಸಾಧಕರಿಗೆ ಅಭಿನಂದನೆಗಳು









**"K-12 Education Leadership"** ಪ್ರಶಸ್ತಿ ಪುರಸ್ಕಾರ ಪಡೆದ ನಮ್ಮ ಸಮುದಾಯದ ಶ್ರೀಮತಿ ಗೌರಿ ಬಿ. ನಟರಾಜ್ (ಪ್ರಾಂಶುಪಾಲರು) ಮತ್ತು ಶ್ರೀಮತಿ ಶ್ರೀದೇವಿ ಬಾಲಸುಬ್ರಹ್ಮಣ್ಯ (ಅಧ್ಯಾಪಕರು)ರವರಿಗೆ ಸಂಘ ಶುಭ ಹಾರೈಸುತ್ತದೆ.

ಶ್ರೀಮತಿ ಶ್ರೀದೇವಿ ಅವರು 2014ರಲ್ಲಿ ಕೇಂದ್ರ ಸರ್ಕಾರದ CBSEನ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಯನ್ನು ಗಳಿಸಿದ್ದಾರೆ.

ಶ್ರೀಮತಿ ಗೌರಿ ಬಿ. ನಟರಾಜ ಅವರು 2014ರಲ್ಲಿ ರೋಟರಿ ಕ್ಲಬ್ (ಬೆಂಗಳೂರು) ಅವರಿಂದ ಅತ್ಯುತ್ತಮ ಪ್ರಾಂಶುಪಾಲರು ಪ್ರಶಸ್ತಿಯನ್ನು ಗಳಿಸಿದ್ದಾರೆ.



ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವಕೀಲ ಶ್ರೀ ಕೆ.ಎಸ್. ಅರುಣ್‌ರವರು ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ರಾಜ್ಯ ಸರ್ಕಾರದ "Pleader" ಆಗಿ ನೇಮಕಗೊಂಡಿರುತ್ತಾರೆ.



ಶ್ರೀ ಕೆ.ಎಸ್. ಅರುಣ್‌ರವರ ಪತ್ನಿ ಶ್ರೀಮತಿ ವಕೀಲೆ ವಿನುತ ಅರುಣ್‌ರವರು ನೋಟರಿಯಾಗಿ ಕೇಂದ್ರ ಸರ್ಕಾರದಿಂದ ನೇಮಕಗೊಂಡಿರುತ್ತಾರೆ.



Inner Wheel Club of Mysore

Certificate of Appreciation


This certificate is awarded to Vindhyasri K for securing 1st place (Group-2) in the Shloka chanting competition titled

"Shruthi Smarane"

conducted by the Inner Wheel Club of Mysore to commemmorate Childrens' day in November 2020.

Mrs. Ramya Ashok, HOPE Coordinator — Mrs. Jyotsna R Irani, President 2020-21

ಸದಸ್ಯ ಶ್ರೀ ಕಾರ್ತಿಕ್ ರವಿಕುಮಾರ್ ಅವರ ಪುತ್ರಿ ಕುಮಾರಿ ವಿಂಧ್ಯಶ್ರೀ ಮೈಸೂರಿನ "ಇನ್ನರ್ ವೀಲ್ ಕ್ಲಬ್" ಆಯೋಜಿಸಿದ್ದ ಶ್ಲೋಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ.



ರಂಗೋಲಿ ಕಲಾವಿದೆ ಪಲ್ಲವಿ ಗುರುಪ್ರಸನ್ನ

ನಮ್ಮವರು

# ನೀರಿನ ನಂಜುಂಡಯ್ಯ – 'ನೀ.ನಂ'



**ಸಾ**ರ್ವಜನಿಕವಾಗಿ ಸೇವೆ ಮಾಡಲು ಆಸ್ತಿ, ಅಂತಸ್ತು, ಸಿರಿತನ, ಹಿರಿತನದ ಅವಶ್ಯಕತೆ ಇಲ್ಲ. ಅಲ್ಲಿ ಮುಖ್ಯವಾಗಿ ಇರಬೇಕಾದದ್ದು ಕಾಳಜಿ ಹಾಗೂ ಹೃದಯ ಶ್ರೀಮಂತಿಕೆ. ಸಾರ್ವಜನಿಕರ ಸೇವೆ ಮಾಡುವ ಇಚ್ಛಾಶಕ್ತಿಯುಳ್ಳ ಅನೇಕ ವ್ಯಕ್ತಿಗಳು ನಮ್ಮಗಳ ನಡುವೆ ಇದ್ದರೂ ಎಲೆಯ ಮರೆಯ ಕಾಯಿಯಂತೆ ಯಾರ ಗಮನವನ್ನೂ ತಮ್ಮತ್ತ ಸೆಳೆಯದೆ, ತಮ್ಮನ್ನು ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡು ಇಹಲೋಕದಿಂದ ಮರೆಯಾದವರು ಎಷ್ಟೋ ಮಂದಿ. ಅಂತಹ ವ್ಯಕ್ತಿಗಳ ಸೇವೆಯನ್ನು ನೆನಪಿಸಿಕೊಂಡು ದಾಖಲು ಮಾಡಿದಲ್ಲಿ, ಅವರ ನಿಸ್ವಾರ್ಥ ಸೇವೆಗೆ ನಮ್ಮಗಳ ಸಣ್ಣದಾದ ಕೃತಜ್ಞತೆ ಅರ್ಪಿಸುವ ಒಂದು ಅವಕಾಶ ದೊರೆತಂತೆ.

ತಮ್ಮ ಹೆಸರಿನ ಜೊತೆಗೆ ತಮ್ಮ ವೃತ್ತಿಯಿಂದ ತಮ್ಮನ್ನು ಗುರುತಿಸಿಕೊಳ್ಳುವುದು ಸಾಮಾನ್ಯ. ಆದರೆ ಇದೊಂದು ವಿಶೇಷವಾದ ವೃತ್ತಿಯಿಂದ ತನ್ನನ್ನು ಗುರುತಿಸಿಕೊಂಡ ವ್ಯಕ್ತಿ ಎಂದರೆ "ನೀರಿನ ನಂಜುಂಡಯ್ಯ". ಕಿತ್ತಿಗಾನಹಳ್ಳಿಯ ನಾಗಾರಾಧನೆ ಇನ್ನೇನು ಎರಡು ಮೂರು ದಿನ ಇದೆ ಅನ್ನುವುದರೊಳಗೆ ಶಾಮಣ್ಣ ದೀಕ್ಷಿತರ ಮನೆಯಲ್ಲಿ 'ನೀರಿನ ನಂಜುಂಡಯ್ಯ'ನವರು ಪ್ರತ್ಯಕ್ಷ. ಜಾತ್ರೆಯ ಎಲ್ಲ ಕಾರ್ಯಕ್ರಮಗಳು ಮುಗಿಯುವವರೆಗೆ ಎಂಟು–ಹತ್ತು ದಿನ ದೀಕ್ಷಿತರ ಮನೆಯಲ್ಲಿ ಠಿಕಾಣಿ.

ಒಂದು ತುಂಡು ಪಂಚೆ, ಹೆಗಲ ಮೇಲೊಂದು ಟವಲ್ ಇದಿಷ್ಟೇ ನಾವು ಕಂಡ ತೆಲುಗು ಮಾತನಾಡುವ, ಬ್ರಹ್ಮಚಾರಿಯಾಗಿದ್ದ "ನೀ.ನಂ" ಅವರ ವೇಷಭೂಷಣ. ಎಪ್ಪತ್ತರ ದಶಕದಲ್ಲಿ ಕಿತ್ತಿಗಾನಹಳ್ಳಿಯ ನಾಗಾರಾಧನೆಗೆ ಬರುತ್ತಿದ್ದ ಬಹುತೇಕ ಬೃಹಚ್ಚರಣರಿಗೆ 'ನೀ.ನಂ' ಅವರ ಪರಿಚಯ ಖಂಡಿತವಾಗಿ ಇದ್ದೀತು.


ಮಿತವಾದ ಮಾತು, ಸದಾಕಾಲವೂ ಕೈಯಲ್ಲಿ ಒಂದೆರಡು ತಾಮ್ರದ ಕೊಡ. ಜಾತ್ರೆಯ ಕಾರ್ಯಕ್ರಮಗಳ ಅಡುಗೆಯ ಕೆಲಸಕ್ಕೆ, ಭಕ್ತಾದಿಗಳು ಕುಡಿಯಲು ಸಿಹಿ ನೀರನ್ನು ಸುತ್ತ ಮುತ್ತಲಿನ ಬಾವಿಯಿಂದ ತಂದು ದೊಡ್ಡ ದೊಡ್ಡ ಪಾತ್ರೆಗಳಲ್ಲಿ ತುಂಬಿಸಿಡುವುದು ಮಾತ್ರವೇ ಅವರ ಕೆಲಸ. ಸುಮಾರು ಒಂದು ಅರ್ಧ ಕಿ.ಮೀ. ದೂರದ ಸುತ್ತಮುತ್ತಲಿನ ಬಾವಿಯಿಂದ ದಿನಕ್ಕೆ ಕನಿಷ್ಠ ಮೂವತ್ತು, ನಲವತ್ತು, ಐವತ್ತು ಕೊಡ ನೀರು ಸರಬರಾಜು ಮಾಡುವುದು ಅವರ ಕೆಲಸ. ಸಮಯ ಸಿಕ್ಕಾಗ ಉಪಹಾರ, ಊಟ ಮುಗಿಸಿ, ಮತ್ತೆ ತಮ್ಮ ಕೆಲಸದಲ್ಲಿ ತಾವು ತೊಡಗಿಸಿಕೊಳ್ಳುತ್ತಿದ್ದರು.

ನನ್ನ ನೆನಪಿನಂತೆ, ನಾನು ಚಿಕ್ಕಂದಿನಿಂದಲೂ ಅವರನ್ನು ಸರಿ ಸುಮಾರು ಇಪ್ಪತ್ತು, ಇಪ್ಪತ್ತೈದು ವರ್ಷ ಕಂಡಿದ್ದೆ. ಬಹುಶಃ 1975ರ ನಂತರ ಅವರನ್ನು ಕಂಡ ನೆನಪಿಲ್ಲ. ಆಗ ಅವರಿಗೆ ಸುಮಾರು ಅರವತ್ತರ ಆಸುಪಾಸು ಇರಬಹುದು. ಅವರು ಆನೇಕಲ್ಲಿನ ದೊಡ್ಡಕೆರೆಯ ಬ್ರಾಹ್ಮಣರ ಬೀದಿಯಲ್ಲಿ ವಾಸವಿದ್ದರು ಎಂಬ ಮಾಹಿತಿ.

ನಮ್ಮ ತಾಲ್ಲೂಕಿನ ಬಹುತೇಕ ಜಾತ್ರೆಗಳು ನಡೆಯುವ ಸ್ಥಳಗಳಾದ ಆನೇಕಲ್ಲು, ಬಿದರುಗುಪ್ಪೆ, ಅತ್ತಿಬೆಲೆ, ಬನ್ನೇರುಘಟ್ಟ ಮುಂತಾದ ಕಡೆ ನಡೆಯುವ ಜಾತ್ರೆಗಳಲ್ಲಿ ಅವರು ನೀರನ್ನು ಸರಬರಾಜು ಮಾಡುವ ಕೆಲಸಕ್ಕೆ ಹಾಜರಾಗುತ್ತಿದ್ದದ್ದನ್ನು ಗಮನಿಸಿದ್ದೇನೆ.

ಅಂದಿನ ದಿಗಳಲ್ಲಿ ಅವರ ಸೇವೆ ಹೆಚ್ಚು ಮಹತ್ವದ್ದು ಎನಿಸುತ್ತಿರಲಿಲ್ಲ. ಇಂದು ಅವರ ಸೇವೆಯನ್ನು ನೆನಪಿಸಿಕೊಂಡಾಗ, 'ನೀ.ನಂ' ಅವರ ನಿಸ್ವಾರ್ಥ ಸೇವೆ ಮಹತ್ತರವಾದುದು ಎನಿಸುವುದು ಸಹಜ. ಆ ಮಹನೀಯನ ಆತ್ಮಕ್ಕೆ ಭಗವಂತ ಚಿರಶಾಂತಿ ನೀಡಲಿ ಎಂಬ ನಮ್ಮೆಲ್ಲರ ಪ್ರಾರ್ಥನೆಯೊಂದಿಗೆ.

ಧನ್ಯವಾದಗಳು.




◆ ವಿ.ಎಸ್.ಮಣಿ
9845055582


**ಸಂಘಕ್ಕೆ ಸೇರ್ಪಡೆಯಾದ ನೂತನ ಪೋಷಕರು ಹಾಗೂ ಸದಸ್ಯರು**

* ಅಜಯ್ ಕುಮಾರ್ ಎನ್.
* ಜಯಶ್ರೀ ಸೋಮಸುಂದರ
* ಸಾಗರ್ ಶಿವಕುಮಾರ್
* ರವಿಶಂಕರ ಆರ್.ಎಸ್.
* ಭಾನುಮತಿ ಜಿ.
* ವಿಮಲ ಜಯರಾಂ



# ಸ್ಕಂದನ ಪೂರ್ವ ವೃತ್ತಾಂತ ರಹಸ್ಯ

**ಒ**ಮ್ಮೆ ಶ್ರೀ ಸದ್ಗುರು ದತ್ತಾತ್ರೇಯರ ಬಳಿ ಪರಶುರಾಮರು ಪ್ರಶ್ನಿಸುತ್ತಾರೆ. ಇಲ್ಲಿರುವ ಈ ಅದ್ಭುತವಾದ ಶಿವತೇಜಸ್ಸು ವಿರುವವನು ಯಾರು? ಅದರ ವಿಷಯ ತಿಳಿಯಲು ಕುತೂಹಲ ಉಂಟಾಗಿದೆ. ತಾವು ಕೃಪೆ ಮಾಡಿ ತಿಳಿಸಿ ಎಂದು ಶ್ರದ್ಧಾ ಭಕ್ತಿ ಯಿಂದ ಕೇಳಿದರು.

ಬ್ರಹ್ಮಮಾನಸ ಪುತ್ರ ಸನತ್ಕುಮಾರ ಋಷಭ ಪರ್ವತ ದಲ್ಲಿ ತಪೋ ನಿರತನಾಗಿದ್ದ. ಬ್ರಹ್ಮ ಮಗನನ್ನು ಕಾಣಲು ಬಂದ. ಮಗನ ಆತ್ಮೀಯ ಆತಿಥ್ಯದಿಂದ ಸಂತೋಷವಾಯಿತು. ಆಗ ಸನತ್ಕುಮಾರ ಕೇಳಿದ, ನನಗೆ ಸ್ವಪ್ನದಲ್ಲಿ ದೇವಾಸುರ ಯುದ್ಧದಲ್ಲಿ ತಾನು ಭಾಗಿಯಾಗಿ ರಕ್ಕಸ ಸಂಹಾರ ಮಾಡಿ ದಂತೆ ಕಂಡೆ. ಇದು ಹೇಗೆ ಸಾಧ್ಯ?

ಹಿಂದೆ ದೇವಾಸುರ ಸಂಗ್ರಾಮದ ವಿಚಾರ ಕೇಳಿ ನಾನು ಯುದ್ಧದಲ್ಲಿ ದೇವತೆಗಳಿಗೆ ಸಹಾಯ ಮಾಡುವೆ ಎಂದು ವೈಶ್ವಾನರ ಉಪಾಸನೆಗೈದೆ. ಮಧ್ಯದಲ್ಲಿ ನನ್ನ ಮರಣ ವಾಯಿತು. ನಂತರ ಕರ್ಮಾಧೀನನಾಗದೆ ಸ್ವೇಚ್ಛೆಯಿಂದ ಮಾನಸ ಪುತ್ರನಾದೆ.

ಒಮ್ಮೆ ಶಿವ–ಪಾರ್ವತಿ ಸನತ್ಕುಮಾರರ ಆಶ್ರಮಕ್ಕೆ ಬಂದರು. ಆದರೆ ಸನತ್ಕುಮಾರ ಶಿವ–ಪಾರ್ವತಿಯರನ್ನು ಗಮನಿಸದೆ ತಪಸ್ಸಿನಲ್ಲಿ ಇದ್ದರು. ಶಿವ–ಪಾರ್ವತಿಯರು ನಮ್ಮನ್ನು ಸ್ವಾಗತಿಸಲಿಲ್ಲ. ಆದರೂ ನಿನ್ನ ಕ್ಷಮಿಸಿದ್ದೀವಿ ಎಂದರು.

ಸನತ್ಕುಮಾರ ನನಗೆ ಯಾವುದೇ ಭಯ, ಅಭಿಮಾನ ಇಲ್ಲದೆ ತಪೋನಿರತನಾಗಿದ್ದೆ. ಶಾಪ–ವರ ಎರಡೂ ನನಗೆ ಅಂಟಿಲ್ಲ ಎಂದರು. ಶಿವ ಪ್ರಸನ್ನತೆಯಿಂದ ಯಾವ ವರ ಕೊಡಲಿ ಎಂದರೆ ಸನತ್ಕುಮಾರ ನಾನೇ ನಿನಗೆ ವರ ಕೊಡುವೆ. ಇಬ್ಬರೂ ಅದ್ವೈತ ಸಿದ್ಧಾಂತದಲ್ಲಿದ್ದೀವಿ. ಎಲ್ಲವೂ ಬ್ರಹ್ಮಮಯನು ಎಂದರು. ಆಗ ಶಿವನು ನೀನು ನನಗೆ ಸುತನಾಗಬೇಕು ಎಂದರು. ಸನತ್ಕುಮಾರನು ಅದಕ್ಕೆ ನಿನಗೆ ಮಾತ್ರ ಸುತನಾಗುವೆ ಪಾರ್ವತಿಗಲ್ಲ ಎಂದ. ಆಗ ದೇವಿ ನಾವು ಅರ್ಧನಾರೀಶ್ವರ ತತ್ತ್ವ, ಇಬ್ಬರಿಗೂ ಸುತನಾಗ ಬೇಕೆಂದಳು. ಸನತ್ಕುಮಾರನು ಸುತನಾಗುವೆ, ಆದರೆ ಶರೀರ ಸಂಪರ್ಕಬೇಡ. ಇದು ನನ್ನ ನಿಯಮ ಎಂದು ತಾಯಿ ಜಗಜ್ಜನನಿ, ನಿನ್ನ ಅಪೇಕ್ಷೆಯಂತೆ ಎಂದು, ನೀನು ಹಿಂದೆ ದಕ್ಷಯಜ್ಞದಲ್ಲಿ ನಿನ್ನ ದೇಹ ಯೋಗಾಗ್ನಿಗೆ ಭಸ್ಮವಾಯಿತು. ಆಗ 52 ಶಕ್ತಿ ಪೀಠಗಳಾಯ್ತು. ಗಂಗಾ ತಟದಲ್ಲಿ ನಿನ್ನ ತೇಜಸ್ಸು ಹುಲ್ಲಿನಲ್ಲಿ ಬಿದ್ದು ಹಿರಣ್ಮಯವಾಯ್ತು. ಆಗ ಶರವಣದ ಆವರಣದಲ್ಲಿ ಪ್ರಕಟನಾಗಿ ನಿನ್ನ ಸುತನಾಗುವೆ. ಅನುಗ್ರಹಿಸು. ಇಬ್ಬರ ಆಸೆಯು ಪೂರೈಸಿತು. ಜಗತ್ತಿನ ಕಲ್ಯಾಣವು ಆಯ್ತು ಎಂದನು. ಶಿವನ ತೇಜಸ್ಸು ಜಾರಿ ಸ್ಕಂದನೆಂದು, ಕೃತ್ತಿಕೆಯರಿಂದ ಕಾರ್ತಿಕೇಯನೆಂದು, ಹುಲ್ಲಿನಲ್ಲಿ ಪ್ರಕಟನಾದ್ದರಿಂದ ಶರವಣಭವನೆಂದು, ಆರು ಮುಖದಿಂದ ಷಣ್ಮುಖನೆಂದು, ಮುದ್ದಾದ ಮುಖ ವಿರುವುದರಿಂದ ಮುರಗನೆಂದು, ಪಾರ್ವತಿ ಕೊಟ್ಟ ಶಕ್ತ್ಯಾಯುಧದಿಂದ ವೇಲಾ ಎಂದು ಪ್ರಸಿದ್ಧಿ ಹೆಸರುಗಳಾಯ್ತು.

ಯೋಗ ಪರವಾಗಿ ಕುಂಡಲಿನೀ ಶಕ್ತಿಯಾಗಿ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾಚಕ್ರಗಳಾಗಿ ಶಕ್ತಿಕೇಂದ್ರದಲ್ಲಿ ಸರ್ಪಾಕಾರದಲ್ಲಿ ಇರುವ ಸುಬ್ರಹ್ಮಣ್ಯನ ಪುಣ್ಯ ಚರಿತ್ರೆ ಪಾವನ, ಮಂಗಳಕರ. ದುರಿತಹರವೆಂದು (ತ್ರಿಪುರಾ ರಹಸ್ಯದಲ್ಲಿ) ಶ್ರೀ ಸದ್ಗುರು ದತ್ತಾತ್ರೇಯರು ಶಿಷ್ಯನಾದ ಭಾರ್ಗವ ರಾಮನಿಗೆ ತಿಳಿಸಿದರು.

ಕಿತ್ತಿಗಾನಹಳ್ಳಿಯಲ್ಲಿ ಶ್ರೀವಲ್ಲಿ–ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯಸ್ವಾಮಿ ನಾಗಾರಾಧನೆ ಅತ್ಯಂತ ವಿಜೃಂಭಣೆ ಯಿಂದ ನಡೆಯುತ್ತದೆ. ಶ್ರೀ ಮಹಾಗಣಪತಿ, ಶ್ರೀ ಗಾಯತ್ರಿ ದೇವಿ, ಭೂನೀಳಾ ಸಮೇತ ಶ್ರೀ ಶ್ರೀನಿವಾಸ ಕುಲದೈವ ಸನ್ನಿಧಾನವೂ, ನವಗ್ರಹ ಪರಿವಾರ ದೇವತೆಗಳ ಸಾನಿಧ್ಯ ಇದೆ. ಇಂತಹ ಕ್ಷೇತ್ರ ದರ್ಶನದಲ್ಲಿ ಇಡೀ ಭಕ್ತ ಸಮೂಹ ದೇವತಾರಾಧನೆ, ಅನ್ನದಾನ ಇತರ ಅನೇಕ ಕಲ್ಯಾಣ ಕಾರ್ಯ ನಡೆಸಿ ಜನ್ಮದ ಕರ್ಮ ಕಳೆದು ಧನ್ಯವಾಗುತ್ತಾರೆ. ಇದು ನಮ್ಮ ಹೆಮ್ಮೆಯ ನಾಗೇಶ್ವರ ಕ್ಷೇತ್ರ ಮಂಗಳಕರ, ಶುಭಕರ. ಇದನ್ನು "ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ" ಅತ್ಯಂತ ದಕ್ಷತೆಯಿಂದ ನಡೆಸಿಕೊಂಡು ಬರುತ್ತಿದೆ.

◆ **ಭ್ರಮರಾ ಗೋಪಿನಾಥ್**
6366701153



*(5ನೇ ಪುಟದಿಂದ ಮುಂದುವರೆದಿದೆ......)*

ಮುಂದಿನ ದಿನಗಳಲ್ಲಿ ಇದರ ಬಗ್ಗೆ ಕ್ರಮ ಕೈಗೊಂಡಲ್ಲಿ, ಸಮುದಾಯದವರಿಗೆ ನಾಗಾರಾಧನೆ ಆಚರಣೆಯ ಪ್ರಾರಂಭದ ಮೂಲದ ಮಾಹಿತಿ ದೊರಕಿದಂತಾದೀತು.


ಇನ್ನು ಇಲ್ಲಿನ ಅಶ್ವತ್ಥ ಕಟ್ಟೆಯ ಪೂರ್ವ ದಿಕ್ಕಿನಲ್ಲಿ ಇರುವ ಕಲ್ಲಿನಲ್ಲಿ ಕೆತ್ತಿರುವ ಫಲಕದಲ್ಲಿನ ಮಾಹಿತಿ ಹೀಗಿದೆ.

ಸ್ವಸ್ತಿ ಶ್ರೀ ಶಾಲಿವಾಹನಶಕ 1860ನೆಯ ಬಹುಧಾನ್ಯ ಸಂವತ್ಸರ ಮಾಘ ಬುಧವಾರ ಶ್ರೀಮಾನ್ ದಿವಂಗತ (ಸಬ್ ಜಡ್ಜಿ) ಕಾಚರಕನಹಳ್ಳಿಯ "ಲಕ್ಷ್ಮೀನಾರಾಯಣಯ್ಯ"ನವರ ಜ್ಞಾಪಕಾರ್ಥವಾಗಿ ಅವರ ಕುಮಾರರಾದ ಶ್ರೀ ಪದ್ಮನಾಭಯ್ಯ ನವರು ಕಟ್ಟಿಸಿ ಪುನಃ ಪ್ರತಿಷ್ಠೆ ಮಾಡಿಸಿದ ಈ ಅಶ್ವತ್ಥ ನಾಗರಕಟ್ಟೆ. ಶ್ರೀ ನಾಗೇಶ್ವರ ಪರಬ್ರಹ್ಮ ಪ್ರೀತಿಕರವಾಗಿ ಇಲ್ಲಿನ ಫಲಕದಲ್ಲಿ ನಮೂದಿಸಿರುವ ಶಾಲಿವಾಹನಶಕ ಸಂವತ್ಸರದ ತೇದಿಯನ್ನು English calendarಗೆ ಪರಿವರ್ತಿಸಿದಾಗ ಸಿಗುವ ದಿನಾಂಕ 25.01.1939 ಬುಧವಾರ ಅಂದರೆ ಇಸವಿ, 2021ಕ್ಕೆ ಸುಮಾರು 83 ವರ್ಷಗಳ ಹಿಂದೆ ಪುನಃ ಪ್ರತಿಷ್ಠಾಪನೆ ಮಾಡಿಸಿದ ದಾಖಲೆ ಇದೆ ಎಂದಾಯಿತು. ಇದಕ್ಕೆ ಹಿಂದೆ ಕೆಲವು ಬಾರಿ ಇಂತಹ ಪುನಃ ಪ್ರತಿಷ್ಠಾಪನೆ ಕಾರ್ಯಗಳು ನಡೆದಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಇತ್ತೀಚೆಗೆ, ನಮ್ಮ ಬೃಹಚ್ಚರಣ ಸಂಘದ ವತಿಯಿಂದ 2011ನೇ ಇಸವಿಯಲ್ಲಿ ಭಾಗಶಃ ಶಿಥಿಲಗೊಂಡಿದ್ದ 'ನಾಗರ ಕಟ್ಟೆಯ' ಪುನಃ ಜೀರ್ಣೋದ್ಧಾರ, ವಿಗ್ರಹಗಳ ಪುನಃ ಪ್ರತಿಷ್ಠಾಪನೆಯ ಕಾರ್ಯವನ್ನು ಕೈಗೆತ್ತಿಕೊಂಡು ಸಮರ್ಪಕ ವಾಗಿ ನಿರ್ವಹಿಸಿಲಾಯಿತು. ಜೀರ್ಣೋದ್ಧಾರ ಕಾರ್ಯವು ಯಶಸ್ವಿಯಾಗಿ ನೆರವೇರಲು ಸಂಘದ ಎಲ್ಲ ಸದಸ್ಯರ ಸಹಕಾರ, ಸಹಯೋಗ, ಪ್ರೋತ್ಸಾಹವನ್ನು ಈ ಸಂದರ್ಭ ದಲ್ಲಿ ಸ್ಮರಿಸಲಾಗಿದೆ.

ಈ ಮೇಲ್ಕಂಡ ಲೇಖನದ ಬಹುತೇಕ ಮಾಹಿತಿಯನ್ನು ಸಂಗ್ರಹಿಸಲು ಸಹಕಾರ ನೀಡಿದ ನಮ್ಮ ಸಂಘದ ಸದಸ್ಯರು, ಹಾಗೂ ನಿಕಟಪೂರ್ವ ಕಾರ್ಯದರ್ಶಿಗಳಾದ ಕಿತ್ತಿಗಾನ ಹಳ್ಳಿಯ ವಿ.ಎಸ್. ಮಣಿ ಅವರಿಗೆ ಧನ್ಯವಾದಗಳನ್ನು ಈ ಮೂಲಕ ಅರ್ಪಿಸುತ್ತಿದ್ದೇನೆ.

ಧನ್ಯವಾದಗಳು,



◆ **ಎಸ್.ಸಿ. ಶ್ರೀನಿವಾಸ**
ಎಂ.ಎಂ.ಡಿ.ಬಿ.ಎಸ್.

# ನಾಗಾರಾಧನೆ – 2021

**ಆ**ನೇಕಲ್ಲು ತಾಲ್ಲೂಕು ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರ ದಲ್ಲಿ ನಾಗಾರಾಧನೆಯು ದಿನಾಂಕ: 18–3–2021ರಂದು ಕೋವಿಡ್–19ರ ನಿಯಮಾವಳಿಗಳ ಪ್ರಕಾರ ಸರಳವಾಗಿ ಆದರೆ ಶಾಸ್ತ್ರೋಕ್ತವಾಗಿ ನಡೆಯಿತು. ಸಮುದಾಯದವರು ಭಕ್ತಿ, ಶ್ರದ್ಧೆಗಳಿಂದ ಪ್ರತಿಷ್ಠಾಪಿಸಲ್ಪಟ್ಟಿರುವ ನಾಗರ ವಿಗ್ರಹ ಗಳಿಗೆ ತನಿ ಎರೆದು, ವಟುಗಳಿಗೆ ಪಾದಪೂಜೆಯೊಂದಿಗೆ ದಕ್ಷಿಣೆ, ತಾಂಬೂಲ, ವಸ್ತ್ರ ನೀಡಿ ಅವರನ್ನು ಸುಬ್ರಹ್ಮಣ್ಯ ರೂಪವೆಂದು ಪರಿಗಣಿಸಿ ಧನ್ಯತೆ ಭಾವ ಹೊಂದಿದರು.

ಕ್ಷೇತ್ರದ ದೇವತೆಗಳಾದ ಭೂ–ನೀಳಾ ಸಮೇತ ಶ್ರೀನಿವಾಸ ದೇವರು, ಗಣಪತಿ, ಗಾಯತ್ರಿದೇವಿ ಮತ್ತು ವಳ್ಳಿ ದೇವಸೇನಾ ಸಮೇತ ಸುಬ್ರಹ್ಮಣ್ಯ ಸ್ವಾಮಿಗೆ ಅಭಿಷೇಕ, ಪೂಜೆ, ಅಲಂಕಾರ ಮಾಡಲಾಗಿತ್ತು. ನಂತರ ವಳ್ಳಿ–ದೇವಸೇನಾ ಸಮೇತ ಸುಬ್ರಹ್ಮಣ್ಯ ದೇವರ ಉತ್ಸವ ಮೂರ್ತಿ ಗಳನ್ನು ಮಂಗಳವಾದ್ಯ ಸಮೇತ ಮೆರವಣಿಗೆಯಲ್ಲಿ ಶ್ರೀ ಸೂರ್ಯನಾರಾಯಣ ದೀಕ್ಷಿತ್ ಮತ್ತು ಸಹೋದರರ ಸಮಕ್ಷಮದಲ್ಲಿ ನಾಗರಕಟ್ಟೆಗೆ ತರಲಾಯಿತು. ಕ್ಷೇತ್ರದ ಪುರೋಹಿತರಿಂದ ಅನ್ನದಾನಕ್ಕೆ ದೇಣಿಗೆ ನೀಡಿದ ದಾನಿಗಳ ಹೆಸರಿನಲ್ಲಿ ಪೂಜಾ ಸಂಕಲ್ಪ ನೆರವೇರಿಸಲಾಯಿತು.

ಮಹಾಮಂಗಳಾರತಿ ಆದ ನಂತರ ಸಮುದಾಯದ ರಾಜಾಪುರ ಕುಟುಂಬದವರು ಹಾಗೂ ಶ್ರೀ ಆರ್. ಗೋಪಾಲರಾವ್ ಕುಟುಂಬದವರಿಂದ ಪಾನಕ, ಕೋಸಂಬರಿ, ಹುಳಿಯವಲಕ್ಕಿ ಪ್ರಸಾದ ರೂಪದಲ್ಲಿ ವಿತರಿಸಲಾಯಿತು. ಮಹಾಪ್ರಸಾದ ಭೋಜನ ಏರ್ಪಡಿಸ ಲಾಗಿದ್ದು ಸಂಘದ ವತಿಯಿಂದ ಉದ್ದಿನವಡೆಗಳನ್ನು ಸದಸ್ಯರ ಕುಟುಂಬದವರಿಗೆ ವಿತರಿಸಲಾಯಿತು.

ಸಂಘದ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಸಂಘದ ಕಾರ್ಯ ಚಟುವಟಿಕೆಗಳಿಗೆ ಉದಾರ ವಾಗಿ ದೇಣಿಗೆ ನೀಡಿದವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಕಾರ್ಯಕ್ರಮವು ಸುಗಮವಾಗಿ ನೆರವೇರಲು ಆಸಕ್ತಿ ವಹಿಸಿ ಅನುವು ಮಾಡಿಕೊಟ್ಟು ಸಹಕಾರ ನೀಡಿದ ಕಿತ್ತಿಗಾನಹಳ್ಳಿಯ ಎಲಾ ಸಮುದಾಯದ ಸದಸ್ಯರಿಗೂ ವಿಶೇಷವಾದ ಧನ್ಯವಾದಗಳು.

ಮುಂದಿನ ವರ್ಷದಲ್ಲಿ ಕೋವಿಡ್–19 ಸಂಪೂರ್ಣ ವಾಗಿ ನಿವಾರಣೆಯಾಗಿ ನಾಗಾರಾಧನೆಗೆ ಹೆಚ್ಚು ಸಮುದಾಯದವರು ಭಾಗವಹಿಸುವಂತಾಗಲಿ ಎಂದು ಸಂಘ ಹಾರೈಸುತ್ತದೆ.

**ಸಂ.**

# ನಾಗಾರಾಧನೆಯ ಚಿತ್ರಗಳು

ಚಿತ್ರಗಳು :
ಎನ್. ಶಿವಕುಮಾರ್

















# ನಾಗಾರಾಧನೆಯ ಚಿತ್ರಗಳು

ಚಿತ್ರಗಳು :
ಎನ್. ಶಿವಕುಮಾರ್




















ಬಾಲ ಪ್ರತಿಭೆಗಳು

## ಕವನ ಸಂಕಲನ – ಸಾಚಿ ಆರ್ಯ




ಬೃಹಚ್ಚರಣ ಪತ್ರಿಕೆಯ ನಿಕಟಪೂರ್ವ ಸಂಪಾದಕರಾದ ಶ್ರೀ ಮಧುಸೂದನ್‌ರವರ ಮೊಮ್ಮಗಳು ಹಾಗೂ ಸದಸ್ಯ ಶಶಾಂಕ್ ದಂಪತಿಗಳ ಪುತ್ರಿ **ಕು॥ ಸಾಚಿ ಆರ್ಯ** (10 ವರ್ಷ) ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ

***"The Way The World Is"***

ಆಂಗ್ಲ ಕವನ ಸಂಕಲನವನ್ನು ಪ್ರಕಟಿಸಿರುವುದು (ಅಮೆರಿಕಾದಲ್ಲಿ) ಸಮುದಾಯದ ಸದಸ್ಯರೆಲ್ಲರಿಗೂ ಹೆಮ್ಮೆಯ ವಿಷಯ. ಸಂಘ ಕು॥ ಸಾಚಿ ಆರ್ಯಗೆ ಶುಭ ಹಾರೈಸುತ್ತದೆ.


10-year-old author publishes book of poems

## ರೇಖಾಚಿತ್ರಗಳು





ವಿಂಧ್ಯಶ್ರೀ ಕಾರ್ತಿಕ್








ಸೃಷ್ಟಿ ಅಶೋಕ್





ಪ್ರಿಯಾ ಗೋವಿಂದ್

**ಯುವ ಪ್ರತಿಭೆ**

# ಕ್ರೀಡಾ ಹಾಗೂ ಚಿತ್ರ ಕಲಾವಿದ ಎಲ್. ಹರಿಕಿರಣ್



ಶ್ರೀ ಎಲ್. ಹರಿಕಿರಣ್ (21 ವರ್ಷ) ಚಲನಚಿತ್ರರಂಗದ ಹಿರಿಯ ಕಲಾವಿದ ಹಾಗೂ ಸಂಘದ ಪೋಷಕರಾದ ಶ್ರೀ ಎಸ್. ಶಿವರಾಂರವರ ಮೊಮ್ಮಗ (ತಂದೆ ದಿ॥ ಎಸ್. ಲಕ್ಷ್ಮೀನಾರಾಯಣ್, ತಾಯಿ ಬಿಂದು ಮಾಲಿನಿ). ಹರಿಕಿರಣ್ ಬಿ.ಹೆಚ್.ಎಸ್. ಕಾಲೇಜಿನಲ್ಲಿ ಬಿ.ಕಾಂ. ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಅತ್ಯಂತ ಕಿರಿಯ ವಯಸ್ಸಿನಿಂದಲೇ ಶೈಕ್ಷಣಿಕ ಶಿಕ್ಷಣವಲ್ಲದೇ ಸ್ವಾಭಾವಿಕವಾಗಿ ಚಿತ್ರ ಬರೆಯುವ ಹವ್ಯಾಸವನ್ನು ಬೆಳೆಸಿಕೊಂಡು ಹಲವಾರು ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಪ್ರಖ್ಯಾತ ಕ್ರಿಕೆಟ್ ಆಟಗಾರರ ಚಿತ್ರಗಳನ್ನು, ಸಂಗೀತ ಕಲಾವಿದರ ಚಿತ್ರಗಳನ್ನು, ವನ್ಯಜೀವಿ ಚಿತ್ರಗಳನ್ನು ರಚಿಸಿರುವುದು ಇವರ ಅಭಿರುಚಿಗೆ ಸಾಕ್ಷಿಯಾಗಿದೆ.

ಮೊದಲಿನಿಂದಲೂ ಕ್ರಿಕೆಟ್ ಆಟದಲ್ಲಿ ಆಸಕ್ತಿಯಿದ್ದು, ತಮ್ಮ 15ನೇ ವಯಸ್ಸಿನಿಂದ ಕ್ರಿಕೆಟ್ ತರಬೇತಿ ಆರಂಭಿಸಿ ವಿವಿಧ ತಂಡಗಳಲ್ಲಿ ಆಟವಾಡುತ್ತಾ ಈಗ ***Zonal Level*** ತಂಡದ ಮೂಲಕ ಭಾರತೀಯ ಕ್ರಿಕೆಟ್ ಟೀಮ್‌ಗೆ "ನೆಟ್ ಬೌಲರ್" ಆಗಿ ಮುಂದುವರಿಯುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಹಣಕಾಸು ವಿಭಾಗದಲ್ಲಿ ಎಂ.ಬಿ.ಎ. ಮಾಡಬೇಕೆಂದು ಇವರ ಅಭಿಲಾಷೆ. ಈ ಯುವಕ ರಾಜ್ಯ ಮತ್ತು ದೇಶದ ಪ್ರಮುಖ ಆಟಗಾರ ಹಾಗೂ ಕಲಾವಿದನಾಗಲೆಂದು ಸಂಘವು ಹಾರೈಸುತ್ತದೆ.

**–ಆರ್. ರಮೇಶ್**
























## ಯಮತಕ್ಷಕ

ಪರೀಕ್ಷಿತ ರಾಜನಿಗೆ ಸಾವು ಸರ್ಪದ ಮೂಲಕ ಬರಬೇಕೆಂದು ವಿಧಿನಿಯಮವಿತ್ತು. ಅದನ್ನು ತಪ್ಪಿಸಿಕೊಳ್ಳಲು ಆ ರಾಜ ಮನುಷ್ಯನಿಗೆ ಸಾಧ್ಯವಾದ ಎಲ್ಲಾ ಉಪಾಯಗಳನ್ನೂ ಮಾಡಿದ. ಆದರೆ ನಾಗಲೋಕದ ತಕ್ಷಕ ಹಣ್ಣಿನೊಳಗಿನ ಕ್ರಿಮಿಯಾಗಿ ರಾಜನ ಕೈಗೆ ಬಂದು, ತನ್ನ ವಿಷದ ಜ್ವಾಲೆಯಿಂದ ಅವನ ಆಯುಷ್ಯವನ್ನು ಮುಗಿಸಿದ.

ಸಾವು ಯಾರಿಗೂ ತಪ್ಪಿದ್ದಲ್ಲ! ಹುಟ್ಟಿದವರಿಗೆ ಸಾವು ತಪ್ಪದು ಎನ್ನುತ್ತದೆ ಗೀತೆ. ಸಾವನ್ನು "ಸಹವರ್ತಿ" ಎಂದು ಕರೆಯುತ್ತದೆ ಅಮರಕೋಶ. ಇಂಗ್ಲೀಷನಲ್ಲಿ "ಡೆತ್ ದಿ ಲೆವೆಲರ್" ಎಂಬ ಕವನ ಇದೇ ಅರ್ಥ ನೀಡುತ್ತದೆ.

ಸಾವು ಬೆಂಕಿಯ ಹಾಗೆ ಸರ್ವಗ್ರಾಸಿ. ಇದು ಹೀಚು, ಇದು ಕಾಯಿ, ಇದು ಮೊಳಕೆ, ಇದು ಕೊಳತು, ಇದು ಹಣ್ಣು, ಇದು ಸಣ್ಣ ಎಂಬ ಯಾವ ವಿಧವಾದ ವ್ಯತ್ಯಾಸವನ್ನು ಮಾಡದೆ ಸಾವು ಅವರವರ ಕಾಲ ಬಂದಾಗ ಎಲ್ಲರನ್ನೂ ಎತ್ತಿಕೊಂಡು ಹೋಗುತ್ತದೆ.

ಸಾವು ಯಾವಾಗ ಬರುತ್ತದೋ, ಸಾವು ಯಾರಿಗೆ ಬರುತ್ತದೋ, ಸಾವು ಏಕೆ ಬರುತ್ತದೋ? ಬಲ್ಲವರು ಯಾರು? ಸಾವು ಬಿಡಿಸಲಾಗದ ಸಮಸ್ಯೆ, ಒಡೆಯಲಾಗದ ಒಗಟು.

ಸಾವಿನ ರಹಸ್ಯ ತಿಳಿಯಬೇಕಾದರೆ, ಯಮನನ್ನು ಎದುರಿಸಿದ ಸಾವಿತ್ರಿಯನ್ನು ಕೇಳಬೇಕು; ಆತನ ಮನೆಯ ಬಾಗಿಲಿನಲ್ಲಿ ಮೂರು ದಿವಸ ಉಪವಾಸ ಇದ್ದ ನಚಿಕೇತನ್ನು ಕೇಳಬೇಕು.

ಸಲ್ಲೇಖನ ವ್ರತದಿಂದ ಸಾವನ್ನು ಗೆದ್ದ ಮಹಾ ಮುಕ್ತಿ ಕ್ಷೇತ್ರ 'ಶ್ರವಣಬೆಳಗೊಳ'. ಅಲ್ಲಿಯ ಒಂದು ಶಾಸನದಲ್ಲಿ ಯಮನನ್ನು "ಯಮತಕ್ಷಕ" ಎಂದು ಕರೆದಿದ್ದಾರೆ.

ತಕ್ಷಕ ಎಂದರೆ ಬಡಗಿ. ಈ ಬಡಗಿ ಸಂಸಾರವೆಂಬ ವನದಲ್ಲಿ ತನಗೆ ಉಪಯೋಗವಾಗುವ ಮರಗಳನ್ನು ಹುಡುಕಿಕೊಂಡು ಬರುತ್ತಾನಂತೆ. ಬಲವಾಗಿ ಬೆಳೆದ ಮರಗಳನ್ನು, ಚೆನ್ನಾದ ವೃತ್ತವಿರುವ ಮರಗಳನ್ನು ಕಂಡಾಗ ಅವುಗಳನ್ನು ಕಡಿದುಕೊಂಡು ಹೋಗುತ್ತಾನಂತೆ. ಆದ್ದರಿಂದ ಅವನಿಗೆ ಏನೂ ಉಪಯೋಗ ಎಂದು ನಾವು ಕೇಳುವಂತಿಲ್ಲ, ಕೇಳಿ ತಿಳಿಯುವಂತಿಲ್ಲ.

"ಪಾಪಿ ಚಿರಾಯು" ಎಂಬ ಸೂಕ್ತಿಯಾದರೂ ಇದೇ ಅರ್ಥ. ತನ್ನನ್ನು ಹುಡುಕಿಕೊಂಡು ಬಂದ ಸಾವಿಗೆ ಯಾವನು ಅಂಜುತ್ತಾನೋ ಅವನು ಅವಿವೇಕಿ? ಎನ್ನುತ್ತದೆ ಕೈಲಾಸಂ ರವರ "ಮಾರ್ಕಂಡೇಯ" ನಾಟಕ.

ಒಟ್ಟಿನಲ್ಲಿ ಮರಣ ಒಂದು ಮಹಾ ರಹಸ್ಯ.



◆ ಎಸ್. ಶ್ರೀನಿವಾಸಯ್ಯ
7899318098

## ಸರ್ಪ ಕುಲೇಶ್ವರ ಮತ್ತಿತಾಳೇಶ್ವರ

**ರಾಗ – ರೇವತಿ**


ಕರುಣ ಸಾಗರ ಕುಕ್ಕೆ ಸುಬ್ರಹ್ಮಣ್ಯ
ಪುಣ್ಯ ಕುಮಾರ ಧಾರೆ ಕುಕ್ಕೆ ಪ್ರತಿವಾಸ ॥ಕರುಣಾಸಾಗರ॥

ಸರ್ಪರೂಪಧರ ಘಾಟಿ ಸುಬ್ರಹ್ಮಣ್ಯ
ಸರ್ಪಕುಲೇಶ್ವರ ಮತ್ತಿತಾಳೇಶ್ವರ ॥ಕರುಣಾಸಾಗರ॥

ನಾಗೇಶ್ವರನೇ ಕುಕ್ಕೆ ಸುಬ್ರಹ್ಮಣ್ಯ
ಫಣಿರಾಜ ಭೂಷಣ ಘಾಟಿ ಸುಬ್ರಹ್ಮಣ್ಯ ।
ಸರ್ಪದೋಷ ನಿವಾರಣ ಮತ್ತಿತಾಳೇಶ್ವರ
ಸರ್ಪಕುಲೇಶ್ವರ ಮತ್ತಿತಾಳೇಶ್ವರ ॥ಕರುಣಾಸಾಗರ॥

ನಾಗ ಸರ್ಪ ಪ್ರತಿಷ್ಠಾ ಸಂಸಾರ ಮುಕ್ತಾ
ಕುಮಾರಧಾರ ತೀರ್ಥ ಸಕಲ ದೋಷ ನಿವಾರಣ ।
ಕಲ್ಯಾಣ ಪ್ರತಿಷ್ಠಾಫಲ ಘಾಟಿ ಸುಬ್ರಹ್ಮಣ್ಯ
ಸರ್ಪಕುಲೇಶ್ವರ ಮತ್ತಿತಾಳೇಶ್ವರ ॥ಕರುಣಾಸಾಗರ॥

ನರಸಿಂಹ ರೂಪ ಘಾಟಿ ಸುಬ್ರಹ್ಮಣ್ಯ
ನಾಗಾಭರಣ ಭೂಷಣ ಕುಕ್ಕೆ ಸುಬ್ರಹ್ಮಣ್ಯ ।
ಚರ್ಮವ್ಯಾಧಿ ನಿವಾರಣ ಮತ್ತಿತಾಳೇಶ್ವರ
ಸರ್ಪರೂಪ ಶ್ರೇಷ್ಠ ಮತ್ತಿತಾಳೇಶ್ವರ ॥ಕರುಣಾಸಾಗರ॥



◆ ಡಾ. ಅಮೃತಕುಮಾರ್
9845731758

## ನಮ್ಮನ್ನಗಲಿದ ನಮ್ಮವರಿಗೆ
## ಗೌರವಪೂರ್ವಕ ಶ್ರದ್ಧಾಂಜಲಿ



ಎ.ವಿ. ರಾಮಸ್ವಾಮಿ (72); 21.2.21; ಶ್ರೀ ವೆಂಕಟಸುಬ್ಬಯ್ಯನವರ ಅಳಿಯ



ಗಾಯತ್ರಿ ; 21.2.21; ಶ್ರೀ ಎಸ್.ವೆಂಕಟಾಚಲಯ್ಯರವರ ಪತ್ನಿ



ಶಾಂತಿ ಸುರೇಶ್; (62); 14.3.21; ಶ್ರೀ ಕೆ.ಬಿ.ಸುರೇಶ್‌ರವರ ಪತ್ನಿ



ಎಸ್. ಶ್ರೀನಿವಾಸನ್ (82); 20.3.21; ಸಂಘದ ಹಿರಿಯ ಸದಸ್ಯ



ಜಯಲಕ್ಷ್ಮಮ್ಮ (74); 5.4.21; ಹಿರಿಯ ಸದಸ್ಯ ಬದರಿನಾರಾಯಣ್ ರವರ ತಾಯಿ




ಎಸ್.ಆರ್.ನಾಗರಾಜ (70); 7.4.2021; ಸದಸ್ಯ ಎಸ್.ಆರ್.ನಾಗಮಣಿಯವರ ಅಣ್ಣ




ಡಾ॥ ಬಿ.ಪಿ.ಶ್ರೀನಿವಾಸಮೂರ್ತಿ (71); 13.4.21; ಹಿರಿಯ ಸದಸ್ಯ ದಿ॥ ಬಿ.ಎಸ್.ಪದ್ಮನಾಭ್ ರವರ ಪುತ್ರ



ಎಸ್.ಆರ್. ವಿಜಯಾಮಣಿ (57); 16.4.2021 ಸದಸ್ಯೆ ಎಸ್.ಆರ್. ನಾಗಮಣಿ ಅವರ ತಂಗಿ



ಎಸ್.ಆರ್.ಶಾರದಮ್ಮ (92); 20.4.21; ಸದಸ್ಯೆ ಎಸ್.ಆರ್.ನಾಗಮಣಿಯವರ ತಾಯಿ



ಜೆ.ಡಿ.ಸತ್ಯನಾರಾಯಣ್ (88); 21.4.21; ಸದಸ್ಯ ಶಿವಶಂಕರ್ ರವರ ತಂದೆ



ಎಸ್.ಎಲ್.ರಾಘವನ್ (74); 21.4.21; ಸದಸ್ಯ ಶ್ರೀ ಸುಬ್ರಹ್ಮಣ್ಯರವರ ಸೋದರ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎಸ್. ರಮೇಶನ್‌ರವರ ಭಾಮೈದ



ಕೆ.ರಾಮಮೂರ್ತಿ (78); 23.4.21; ಸದಸ್ಯ ರವಿಶಂಕರ್‌ರವರ ತಂದೆ



ನಾಗಕುಮಾರಿ (65); 27.4.21; ಶ್ರೀ ಸೇಲಮ್ ಸುಬ್ರಹ್ಮಣ್ಯಂರವರ ಪತ್ನಿ



ಆರ್. ಸಾವಿತ್ರಮ್ಮ (93); 28.4.21; ಸದಸ್ಯ ಶ್ರೀ ರಮೇಶ್‌ರವರ ತಾಯಿ



ಡಾ॥ ಆದಿಶೇಷನ್ (78); 29.4.21; ನಂಜುಡಯ್ಯನವರ ಪುತ್ರ

ಸಂಪಂಗಿರಾಮ್ (ಶಾಮಣ್ಣ) (81); 30.4.21; ಕಾಚರಕನಹಳ್ಳಿ ಲಕ್ಷ್ಮಣರಾವ್‌ರವರ ಪುತ್ರ



ಸತ್ಯಲಕ್ಷ್ಮಿ (78); 30.4.21; ಸದಸ್ಯ ಎ.ವಿ.ಚಂದ್ರಶೇಖರ್‌ರವರ ಪತ್ನಿ

ಚಂಪಕಾ ವೆಂಕಟೇಶನ್ (82); 4.5.21; ಡಿ.ವಿ.ಜಿ.ಯವರ ಮೊಮ್ಮಗಳು



ಹೆಚ್.ವಿ.ಹನುಮಾನ್ (99); 7.5.21; ಸದಸ್ಯ ಹೆಚ್.ವಿಶ್ವನಾಥ್ ರವರ ತಂದೆ

ನಾಗಮಣಿ; 7.5.21; ಶಿಡ್ಲಘಟ್ಟ ರಾಜಾರಾವ್ ರವರ ಪುತ್ರಿ





ವಸುಂಧರಾ ರಾಮಚಂದ್ರ (71); 9.5.21; ಸದಸ್ಯ ಶ್ರೀ ಎನ್. ಪ್ರಭಾಕರ್ ಹಾಗೂ ಸದಸ್ಯ ಶ್ರೀ ಎನ್. ವಿಶ್ವನಾಥ್ ರವರ ಸಹೋದರಿ

ವಿಜಯಲಕ್ಷ್ಮಿ ; 10.5.21; ಶಿಡ್ಲಘಟ್ಟ ರಾಜಾರಾವ್ ರವರ ಪುತ್ರಿ





ಪ್ರಭಾವತಿ; 11.5.21; ಶಿಡ್ಲಘಟ್ಟ ರಾಜಾರಾವ್ ರವರ ಪುತ್ರಿ

ಎನ್.ಎಸ್.ನಾಗರಾಜ್ (77); 20.5.21; ಸಂಘದ ಹಿತೈಷಿ, ದಾನಿಗಳು ಮತ್ತು ಸಂಘದ ನಾಗಾರಾಧನೆ ಮತ್ತು ಶ್ರೀ ಶ್ರೀನಿವಾಸ ಕಲ್ಯಾಣದ ಸಮಯದಲ್ಲಿ ನಿಸ್ಪೃಹರಾಗಿ ಸೇವೆ ಸಲ್ಲಿಸುತ್ತಿದ್ದರು.





ಜಿ.ಎಸ್.ಪದ್ಮಾವತಿ (55); 20.5.21; ಸಂಘದ ಖಜಾಂಚಿ ಶ್ರೀ ಸತ್ಯನಾರಾಯಣರವರ ಪತ್ನಿ


ಆರ್.ಶಂಕರ್ (78); 20.5.21; ಸದಸ್ಯ ಆರ್.ಎಸ್.ಮಹೇಶ್‌ರವರ ಮಾವ





ಎಲ್. ಪ್ರದೀಪ್ ಕುಮಾರ್ (58); 25.5.21; ಹಿರಿಯ ಸದಸ್ಯ ಶ್ರೀ ಎಸ್.ಶಿವರಾಂರವರ ಅಳಿಯ


ಕೆ.ಎಲ್.ವೇಣುಗೋಪಾಲ್ (74); 29.5.21; ಹಿರಿಯ ಸದಸ್ಯ ಶ್ರೀ ಎಸ್.ಶಿವರಾಂರವರ ಭಾವಮೈದುನ





ಹಿರಿಯ ಸದಸ್ಯ ಬೆಟ್ಟಕೋಟೆ ರಾಮಸ್ವಾಮಿ (89); 17.6.21;

ಸೀತಾರಾಂ (90); 19.6.21; ಸಂಘದ ಪೋಷಕ ಶ್ರೀ ಕಲ್ಯಾಣರಾಮನ್‌ರವರ ಮಾವ



ಸುಮಿತ್ರ ಸತ್ಯನಾರಾಯಣನ್ ; 19.6.21; ಸದಸ್ಯ ಬಾಲಕೃಷ್ಣ ಸತ್ಯನಾರಾಯಣ್‌ರವರ ತಾಯಿ

ಶ್ರೀಧರ (67); 19.6.21; ಸದಸ್ಯ ವಿಕ್ರಮ್ ರವರ ತಂದೆ





ಸದಸ್ಯ ಎ.ಎಂ.ಸುಬ್ರಹ್ಮಣ್ಯಂ (78); 6.7.21; ಮುನೀಶ್ವರಯ್ಯನವರ ಪುತ್ರ

ನಳಿನಿ ಜಯರಾಂ; 30.7.21; ಸದಸ್ಯ ಕೆ.ಸಿ. ಜಯರಾಂರವರ ಪತ್ನಿ ಹಾಗೂ ಸದಸ್ಯ ಅರುಣ್ ಕಾರ್ತಿಕ ಅವರ ತಾಯಿ



ಎಸ್. ಚಂದ್ರಶೇಖರ್‌ಅವರು 8.8.2021ರಂದು ನಮ್ಮನ್ನಗಲಿರುತ್ತಾರೆ. ಪೋಷಕ ರವಿಕುಮಾರ್ ಎಸ್. ಅವರ ಚಿಕ್ಕಪ್ಪ



ಲಕ್ಷ್ಮಿದೇವಿ ರಾಮರಾವ್ (99) 28.8.21 ಪೋಷಕ ಸದಸ್ಯರಾದ ದಿ। ಬಿ.ಎಸ್. ಪದ್ಮನಾಭರವರ ಸೋದರಿ ಹಾಗೂ ಸದಸ್ಯರಾದ ಟಿ.ಆರ್. ಮಂಜುಳಾ ಮತ್ತು ಟಿ.ಆರ್. ನೇತ್ರಾನಂದರವರ ಅಜ್ಜಿ

## ಪುಸ್ತಕ ಬಿಡುಗಡೆ....





**ಸಂಘದ ಸದಸ್ಯ, ವನ್ಯಜೀವಿ ಛಾಯಾಗ್ರಾಹಕರಾದ ಶ್ರೀ ಎನ್. ಶಿವಕುಮಾರ್ ಅವರ ``Tails' Tales" ಎಂಬ ವನ್ಯಜೀವಿಗಳ ಛಾಯಾಗ್ರಹಣ ಮತ್ತು ಅವುಗಳ ಜೀವನದ ಸವಿವರ ಚಿತ್ರಗಳೊಂದಿಗೆ ಪ್ರವಾಸ ಕಥನ ಪುಸ್ತಕವನ್ನು ಸಂಘದ ಹಿರಿಯ ಪೋಷಕ, ಛಾಯಾಗ್ರಾಹಕ, ಚಿತ್ರ ನಿರ್ಮಾಪಕ, ನಟ, ಶ್ರೀ ಎಸ್. ಶಿವರಾಂರವರು ದಿ: 24.7.21ರಂದು ಬಿಡುಗಡೆ ಮಾಡಿದರು**





* *

**ಸಂಘದ ಸದಸ್ಯ ಕೆ. ನಟರಾಜ್‌ರವರು ಅವರ ತಾತ ದಾರ್ಶನಿಕ ಡಿ.ವಿ. ಗುಂಡಪ್ಪನವರ "ಜೀವನ ಧರ್ಮ ಯೋಗ" ಪುಸ್ತಕವನ್ನು ಆಂಗ್ಲಭಾಷೆಗೆ ಅನುವಾದಿಸಿದ್ದಾರೆ**




## 'ರಾಷ್ಟ್ರೀಯ ರತ್ನ' ಅಟ್ಟೂರು ರಾಮಕೃಷ್ಣಶರ್ಮ




ಹಿರಿಯ ಸದಸ್ಯ ಶ್ರೀ ಅಟ್ಟೂರು ರಾಮಕೃಷ್ಣ ಶರ್ಮರವರು ತಮ್ಮ ಸೇನೆಯ ಉದ್ಯೋಗದ ಸಮಯದಲ್ಲಿ ಆದ ಹಲವಾರು ಅನುಭವಗಳನ್ನು ``Adventures of a Border Roads Jawan" ಎಂಬ ಪುಸ್ತಕ ಪ್ರಕಟಿಸುವ ಮೂಲಕ ಹಂಚಿಕೊಂಡಿದ್ದಾರೆ. ಶ್ರೀಯುತರು ತುಂಬು ಕುಟುಂಬದಲ್ಲಿ 8ನೇಯವರಾಗಿ ಜನಿಸಿದರೂ ಅನೇಕ ಕಷ್ಟ–ಕಾರ್ಪಣ್ಯಗಳನ್ನು ಅನುಭವಿಸಿದರೂ ಸಿವಿಲ್ ಇಂಜನೀಯರಿಂಗ್‌ನಲ್ಲಿ ಪದವಿ ಗಳಿಸಿ ನಂತರ ಭಾರತ ಸರ್ಕಾರದ ``Border Road Organization" ಮಿಲಿಟರಿ ಸಂಸ್ಥೆಯಲ್ಲಿ 1964ರಿಂದ 1988ರವರೆಗೆ ದೇಶ ಸೇವೆಗಾಗಿ ತಮ್ಮನ್ನು ಸಮರ್ಪಿಸಿಕೊಂಡರು. ಈ ಅವಧಿಯಲ್ಲಿ ಶ್ರೀ ಶರ್ಮರು ಸಿಕ್ಕಿಂನಲ್ಲಿ, 1965–66ರಲ್ಲಿ ಭಾರತ–ಪಾಕಿಸ್ತಾನ ಯುದ್ಧದಲ್ಲಿ, 1971ರ ಬಾಂಗ್ಲದೇಶ್ ಯುದ್ಧದಲ್ಲಿ ಮತ್ತು 1978ರಲ್ಲಿ ಭಾರತ–ಪಾಕಿಸ್ತಾನ್ ಯುದ್ಧದಲ್ಲಿ ಪಾಲ್ಗೊಂಡಿದ್ದರು. ಇದಲ್ಲದೆ ಅವರು ನಾಗಾಲ್ಯಾಂಡ್, ರಾಜಾಸ್ಥಾನ್, ಮೇಘಾಲಯ, ಪೂನಾ, ಅರುಣಾಚಲ ಪ್ರದೇಶ ಮತ್ತು ಲಿಬ್ಯಾ ದೇಶದಲ್ಲೂ ಸೇವೆ ಸಲ್ಲಿಸಿದ್ದಾರೆ. 1988ರಲ್ಲಿ ಸೇನೆಯಿಂದ ಸ್ವಯಂ ನಿವೃತ್ತಿಯ ನಂತರ ಕರ್ನಾಟಕ ಲ್ಯಾಂಡ್ ಆರ್ಮಿ ಮತ್ತು ದೇಶದ ವಿವಿಧ ಖಾಸಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಮ್ಮ ದೇಶದ ಹಲವು ಸ್ಥಳಗಳಲ್ಲಿ, ಯೆಮೆನ್ ಮತ್ತು ಇಥಿಯೋಪಿಯ ದೇಶಗಳಲ್ಲಿ ರಸ್ತೆ ನಿರ್ಮಾಣದಲ್ಲಿ ತಮ್ಮ ಪರಿಣಿತಿಯನ್ನು ಪ್ರದರ್ಶಿಸಿದ್ದಾರೆ.

ಶ್ರೀ ರಾಮಕೃಷ್ಣಶರ್ಮರ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಇದರಲ್ಲಿ ಮುಖ್ಯವಾಗಿ "ಪಶ್ಚಿಮ ಸ್ಟಾರ್", "ಪೂರ್ವಿ ಸ್ಟಾರ್", "ಸ್ವತಂತ್ರ ಮೆಡಲ್", "ರಾಷ್ಟ್ರೀಯ ರತ್ನ"ಗಳಲ್ಲದೇ ಇನ್ನೂ ಹತ್ತು ಹಲವಾರು ಪ್ರಶಸ್ತಿಗಳಿಗೆ ನಾಮ ನಿರ್ದೇಶಿಸಲಾಗಿತ್ತು.

ಶ್ರೀಯುತರು ಅತ್ಯಂತ ಕಠಿಣ ಪ್ರದೇಶ, ವ್ಯತಿರಿಕ್ತ ತಾಪಮಾನ ಮತ್ತು ಭಾರತದ ಶತ್ರು ರಾಷ್ಟ್ರಗಳ ವಿಪತ್ತಿನ ಪರಿಸ್ಥಿತಿಯಲ್ಲಿ ಸೇವೇ ಸಲ್ಲಿಸಿರುವುದು ನಮ್ಮ ಸಮುದಾಯದವರಿಗೆ ಹೆಮ್ಮೆಯ ಸಂಗತಿ. ಇಂತಹವರು ತಮ್ಮ ಅನುಭವವನ್ನು ಪುಸ್ತಕರೂಪದಲ್ಲಿ ಹಂಚಿಕೊಂಡಿರುವುದು ಎಲ್ಲರಿಗೂ ಅವರವರ ಕಾರ್ಯಗಳಲ್ಲಿ ಶ್ರಮವಹಿಸಿ ಜೀವನ ಸಾಗಿಸಲು ಒಂದು ಮಾರ್ಗಸೂಚಿಯಾಗಿದೆ.

**◆ಆರ್. ರಮೇಶ್**

## ಗೃಹಪ್ರವೇಶ



ಸಂಘದ ಸದಸ್ಯೆ ಶ್ರೀಮತಿ ಪದ್ಮಜ ಮತ್ತು ರವಿಕುಮಾರ್ ರವರು "ತ್ರಿಶತಿ" ಎಂಬ ಹೆಸರಿನ ನೂತನ ಗೃಹಪ್ರವೇಶವನ್ನು 27.1.2021ರಂದು ನೆರವೇರಿಸಿದರು.

*

ಸದಸ್ಯ ಶ್ರೀ ಆರ್.ಎಸ್. ರವಿಕುಮಾರ್ ಮತ್ತು ಶ್ರೀಮತಿ ವಸುಮತಿರವರು ದಿನಾಂಕ 22.2.2021ರಂದು ನೂತನ ಗೃಹಪ್ರವೇಶವನ್ನು ನೆರವೇರಿಸಿದರು.

**ಸಂಘದ ಹಿತೈಷಿಗಳಾದ ವಿದ್ಯಾನಿಧಿಗೆ ನೀಡಿದ ಕೊಡುಗೆ**

**ಶ್ರೀ ಅಜಯ್ ಕುಮಾರ್ 2500/-**


**ಬಿ.ಎಸ್. ಸೂರ್ಯನಾರಾಯಣ 2000/-**

**ಬಿ. ಸುಬ್ರಹ್ಮಣ್ಯಂ 830/-**

**ಶ್ರೀ ಆರ್. ಭಗವಾನ್.... 80**

ದಿನಾಂಕ 03.04.21 ಬೆಂಗಳೂರಿನಲ್ಲಿ ಸಂಘದ ಪೋಷಕ ಆರ್. ಭಗವಾನ್ ಅವರಿಗೆ 80 ವರ್ಷ ತುಂಬಿದ ಸಂದರ್ಭದಲ್ಲಿ ಸಂಘವು ಶುಭ ಹಾರೈಸುತ್ತದೆ.

**ರೇಖಾ ಚಿತ್ರ** **ಪಲ್ಲವಿ ಗುರುಪ್ರಸನ್ನ**



## ಸಮಾಜ ಸೇವಾ ನಿರತೆ – ದೀಪ್ತಿ ಶೇಖರ್



**ಸಂ**ಘದ ಪೋಷಕ ಶ್ರೀ ಕೆ.ಸಿ. ಶೇಖರ್ ರವರ ಮಗಳು ಕು॥ ದೀಪ್ತಿ ಶೇಖರ್ ರವರು ದಿನಾಂಕ 8.5.2021ರಂದು ಬಸವನಗುಡಿಯ ಗರುತ್ಮಾನ್ ಪಾರ್ಕ್ ರೆಸಿಡೆಂಟ್ ವೆಲ್ಫೇರ್ ಅಸೋಸಿಯೇಶನ್ ಮೂಲಕ 45 ವರ್ಷಕ್ಕೆ ಮೇಲ್ಪಟ್ಟ ಸುಮಾರು 110 ಜನಕ್ಕೆ ಎರಡನೇ ವ್ಯಾಕ್ಸಿನೇಶನ್ ಅಭಿಯಾನವನ್ನು ಆಂಡಾಳ್ ದೇವಾಲಯ ದಲ್ಲಿ ಆಯೋಜಿಸಿದ್ದರು. ಇವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು, ಬಿಜೆಪಿ ಯುವ ಮಂಡಲದ ಪದಾಧಿಕಾರಿಗಳು ಮತ್ತು ಆರಕ್ಷಕ ಇಲಾಖೆಯ ಅಧಿಕಾರಿಗಳು ಬೆಂಬಲಿಸಿದರು. ಈ ಅಸೋಸಿಯೇಶನ್‌ನ ಇಪ್ಪತ್ತು ಸದಸ್ಯರು ಆಹಾರ, ಪಾನೀಯ ಮತ್ತು ಇತರ ಸರ್ಕಾರದ ಕೋವಿಡ್ ನಿಯಮಗಳನ್ನು ಪಾಲಿಸಲು ಕೈ ಜೋಡಿಸಿದರು.

ಇದಲ್ಲದೆ ಇಲ್ಲಿನ ನಿವಾಸಿಗಳ ಸಹಾಯದೊಂದಿಗೆ ಅವಶ್ಯಕತೆ ಇರುವ ಸುಮಾರು 600 ಜನಕ್ಕೆ ಒಂದು ತಿಂಗಳ ಕಾಲ ಊಟವನ್ನು ಆಯೋಜಿಸಲಾಗಿತ್ತು.

* * *

## ಜನನ



* ಸಂಘದ ಹಿರಿಯ ಸದಸ್ಯೆ ಶ್ರೀಮತಿ ಕೆ.ಆರ್.ರಮಾದೇವಿಯವರ ಪುತ್ರಿ ಪೋಷಕ ಸದಸ್ಯರಾದ ಡಾ॥ ಸುಮಾ ಪ್ರಹ್ಲಾದ್ ಮತ್ತು ಡಾ॥ ಪ್ರಹ್ಲಾದ್ ಸರಾಫ್ ದಂಪತಿಗಳಿಗೆ ದಿನಾಂಕ 27.4.2021ರಂದು ಗಂಡು ಮಗು ಜನನವಾಗಿದೆ.

* ಸಂಘದ ಸದಸ್ಯೆ ಶ್ರೀಮತಿ ಶಾರ್ವರಿ ಶ್ರೀನಿವಾಸನ್ ಮತ್ತು ಶ್ರೀ ನಾಗೇಂದ್ರ ವಿ. ತಿಲಕ್ ದಂಪತಿಗಳಿಗೆ ದಿನಾಂಕ 3.6.2021ರಂದು ಹೆಣ್ಣು ಮಗು ಜನನವಾಗಿದೆ.


* ಶ್ರೀಮತಿ ಸುಪ್ರಿಯಾ ಮತ್ತು ಸದಸ್ಯ ಕೆ.ಬಿ. ಮುರುಳಿ ಅವರ ಮಗಳು ಪದ್ಮಶ್ರೀ ಮತ್ತು ಶಶಾಂಕ ದಂಪತಿಗಳಿಗೆ ದಿನಾಂಕ: 15-8-2021ರಂದು ಗಂಡು ಮಗು ಜನನ ವಾಗಿದೆ.

***ಸಂಘವು ನವಜಾತ ಶಿಶುಗಳಿಗೆ ಶುಭ ಕೋರುತ್ತದೆ***

## ಶುಭ ವಿವಾಹ

* ಸಂಘದ ಪೋಷಕರಾದ ಶ್ರೀ ಗುಂಜೂರ್ ಮಣಿರವರ ಪುತ್ರ **ಚಿ. ಆಶ್ರಯ್**ರವರು ದಿ : 4.3.2021ರಂದು ಆಸ್ಟ್ರೇಲಿಯಾದಲ್ಲಿ ಚಿ॥ **ಎಮಿಲಿ**ರವರೊಂದಿಗೆ ವಿವಾಹವಾದರು.

*




* ಸಂಘದ ಸದಸ್ಯೆ ಶ್ರೀಮತಿ ಎ. ನಾಗರತ್ನ ಮತ್ತು ಶ್ರೀ ಎಸ್.ಆರ್. ಗೋಪಿಕೃಷ್ಣರವರ ಪುತ್ರ **ಚಿ. ಜಿ. ವಿನಯ್** ರವರ ವಿವಾಹವು ಶ್ರೀಮತಿ ಭಾನುಮತಿ ಮತ್ತು ಶ್ರೀ ರಾಮಚಂದ್ರರಾವ್ ಮಗಳು ಚಿ॥ **ವೈ.ಆರ್. ಅಮೂಲ್ಯಾ**ರವರೊಂದಿಗೆ ದಿ: 4.4.2021 ರಂದು ಬೆಂಗಳೂರಿನಲ್ಲಿ ನೆರವೇರಿತು.

*



* ಸದಸ್ಯ ಶ್ರೀ ಆರ್.ಎ. ಶ್ರೀನಿವಾಸ್, ಶ್ರೀಮತಿ ಮೀನಾರವರ ಪುತ್ರ **ಚಿ. ಆರ್.ಎಸ್. ನಾಗಾರ್ಜುನ್**ರವರ ವಿವಾಹವು **ಚಿ॥ ವೀಣಾ**ರವರೊಂದಿಗೆ 29–04–2021ರಂದು ಬೆಂಗಳೂರಿನಲ್ಲಿ ನೆರವೇರಿತು.

*



* ಸಂಘದ ಸದಸ್ಯರಾದ ಶ್ರೀ ಎಂ.ಆರ್. ಸತ್ಯನಾರಾಯಣ ಮತ್ತು ಶ್ರೀಮತಿ ಕುಸುಮಾರವರ ಪುತ್ರಿ **ಚಿ॥ ಪ್ರತೀಕ್ಷಾ**ರವರ ವಿವಾಹವು **ಚಿ. ಗೌತಮ್ ಗಡಿಯಾರ**ರವರೊಂದಿಗೆ ದಿ: 11.8.2021 ರಂದು ಬೆಂಗಳೂರಿನಲ್ಲಿ ನೆರವೇರಿತು.

***ನೂತನ ದಂಪತಿಗಳಿಗೆ ಸಂಘವು ಶುಭ ಹಾರೈಸುತ್ತದೆ.***

### ಸಂಘಕ್ಕೆ ದೇಣಿಗೆ

ಸಂಘದ ಅಧ್ಯಕ್ಷ ಶ್ರೀ ಬಿ. ಸುಬ್ರಹ್ಮಣ್ಯಂ ದಂಪತಿಗಳು ತಮ್ಮ ಮೊಮ್ಮಗುವಿನ ಜನನದ ಸಂದರ್ಭದಲ್ಲಿ ರೂ. 5000/– ಗಳನ್ನು ಸಂಘಕ್ಕೆ ದೇಣಿಗೆ ನೀಡಿರುವುದಕ್ಕೆ ಧನ್ಯವಾದಗಳು.

## ನಾಗರಪಂಚಮಿ

ಇದನ್ನು ಗರುಡಪಂಚಮಿ ಎಂದೂ ಕರೆಯುವರು. ಕಾಫಿಯನ್ನು ಕುಡಿಯದೆ ಈ ಪೂಜೆಯನ್ನು ಮಾಡಬೇಕು. ಇದನ್ನು ಅಣ್ಣ–ತಮ್ಮಂದಿರ ಹಬ್ಬವೆಂದು ಕರೆಯುವರು. ಹುತ್ತಕ್ಕೆ ತನಿ ಎರೆದು, ಆ ಹಾಲನ್ನು ವನಿತೆಯರು ಅಣ್ಣ ತಮ್ಮಂದಿರ ಬೆನ್ನಿಗೆ ಬಳಿಯುತ್ತಾರೆ. ತನಿ ಎರೆದ ಹಾಲಿಗೆ ಹುತ್ತದ ಮಣ್ಣನ್ನು ಸೇರಿಸಿ, ಗರಿಕೆಯಿಂದ ಹಾಲನ್ನು ಬಳಿಯುತ್ತಾರೆ. ಬೆನ್ನು ತೊಳೆಯುವುದು ಎನ್ನುವುದೂ ಉಂಟು.

ಮನೆಯಲ್ಲಿ ಬೆಳ್ಳಿ ನಾಗಪ್ಪನನ್ನು ಇಟ್ಟುಕೊಂಡು ಹಾಲೆರೆಯಬಹುದು. ಈ ಹಾಲಿಗೆ ಹುತ್ತದ ಮಣ್ಣನ್ನು ಬೆರೆಸಬಹುದು. ಹೆಣ್ಣುಮಕ್ಕಳು ಅಣ್ಣ ತಮ್ಮಂದಿರಿಗೆ ಪಾರಿತೋಷಕ ಕೊಡುತ್ತಾರೆ. ಅದರಂತೆಯೆ ಅಣ್ಣ ತಮ್ಮಂದಿರು ಆ ದಿನವೇ ಉಡುಗೊರೆಯನ್ನು ಕೊಡುತ್ತಾರೆ. ಗೌರಿ ಹಬ್ಬಕ್ಕಾಗಿ ಅರಿಸಿನ–ಕುಂಕುಮದ ಜೊತೆಗೆ ಹಣವನ್ನೋ, ವಸ್ತ್ರವನ್ನೋ ಮುಂಗಡವಾಗಿ ಕೊಡುವುದು ಉಂಟು. ಮದುವೆಯಾದ ಹೆಣ್ಣು ಮಕ್ಕಳಿದ್ದರೆ, ಅವರ ಸೋದರರೇ ಬಂದು ಬೆನ್ನು ತೊಳಿಸಿಕೊಂಡು, ಉಡುಗೊರೆಯನ್ನು ಕೊಟ್ಟು ಹೋಗುತ್ತಾರೆ. ಪರಊರಿನಲ್ಲಿದ್ದರೆ ಹೆಣ್ಣು ಮಕ್ಕಳೇ ತವರಿಗೆ ಬಂದು ಈ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸುತ್ತಾರೆ.

ಇನ್ನು ಈ ಹಬ್ಬಕ್ಕೆ ತಯಾರಿಸುವ ಖಾದ್ಯಗಳೆಂದರೆ ಎರಡು ಪಲ್ಯ, ತೊವ್ವೆ, ಸಾರು, ಪಾಯಸ (ಶಾವಿಗೆಯದಲ್ಲ), ಅನ್ನ, ಮಜ್ಜಿಗೆ ಹುಳಿ, ಹಬೆ ಕಡುಬು (ಕುಚ್ಚಿದ ಕಡುಬು), ನುಚ್ಚಿನುಂಡೆ (ತೊಗರಿಯದು), ಬಿಲ್ಲು ಕಡುಬು.

**◆ ಎ.ಎನ್. ಲಕ್ಷ್ಮೀದೇವಿ**

### ಪ್ರಸಾದಕ್ಕೆ ದೇಣಿಗೆ ನೀಡಿಕೆ

ಪೋಷಕ ಶ್ರೀ ಸೋಮಸುಂದರರವರು ನಾಗಾರಾಧಾನೆಯ ಸಂದರ್ಭದಲ್ಲಿ ವಡೆ ಪ್ರಸಾದಕ್ಕಾಗಿ ರೂ. 5000/– ನೀಡಿರುತ್ತಾರೆ. ಸಂಘವು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತದೆ.


### ಉಪನಯನ




ಸದಸ್ಯ ಶ್ರೀ ದಿಲೀಪಕುಮಾರ್‌ರವರ ಮೊಮ್ಮಗ, ಶ್ರೀ ರಾಘವೇಂದ್ರ ದಂಪತಿಗಳ ಪುತ್ರ **ಚಿ.ಆರ್. ಸಮರ್ಥ** ರವರ ಉಪನಯನವು ದಿನಾಂಕ 17.5.2021ರಂದು ನೆರವೇರಿತು.

**ಸಂಘವು ವಟುವಿಗೆ ಶುಭ ಹಾರೈಸುತ್ತದೆ**

ಬಾಲ ಕಲಾವಿದೆ






## ಕು। ಮಹತಿ
## ರಚಿಸಿರುವ ಕೆಲವು
## ಕಲಾಚಿತ್ರಗಳು

**ಸಂಘದ ಸದಸ್ಯ ಸರ್ಜಾಪುರದ ಎಚ್.ಜಿ. ಅನಂತ ದಂಪತಿಗಳ ಸುಪುತ್ರಿ**



























**ಸಂಘವು ಕಲಾವಿದೆಯ ಉಜ್ವಲ ಭವಿಷ್ಯಕ್ಕೆ ಶುಭ ಹಾರೈಸುತ್ತದೆ**

## ‘ಕಲಾ ನಿಪುಣೆ’ – ವಾಗ್ದೇವಿ ಬದರಿನಾರಾಯಣ್



**ಕ**ಲಾರಸಿಕರಾಗಿದ್ದ ವೇ॥ಬ್ರ॥ಶ್ರೀ ನಾಗಭೂಷಣ ಶಾಸ್ತ್ರಿಗಳು ಹಾಗೂ ಶ್ರೀಮತಿ ಪಾರ್ವತಮ್ಮನವರ ಮಗಳು ಶ್ರೀಮತಿ ವಾಗ್ದೇವಿ ಬದರಿನಾರಾಯಣ ರವರದ್ದು ತುಂಬು ಸಂಪ್ರದಾಯಸ್ಥ ಕಲಾ ಕುಟುಂಬ.

ತಂದೆ ಹಾಗೂ ತಾಯಿಯವರು ಸಂಗೀತ, ಚಿತ್ರಕಲೆ, ಶಿಲ್ಪಕಲೆ, ವೇದ, ಪಾಕಶಾಸ್ತ್ರ, ಹೊಲಿಗೆ ಕೆಲಸ ಹೀಗೇ ಹತ್ತು ಹಲವು ಕಲೆಗಳಲ್ಲಿ ನೈಪುಣ್ಯತೆಯನ್ನು ಹೊಂದಿದ್ದರು.

ಶ್ರೀಮತಿ ವಾಗ್ದೇವಿಯವರು ಬಾಲ್ಯದಲ್ಲಿಯೇ ತಂದೆ ಯವರು ಮಾಡುತ್ತಿದ್ದ ಗಣಪತಿ ವಿಗ್ರಹಗಳಿಗೆ ಒಡವೆಗಳ ವಿನ್ಯಾಸಗಳನ್ನು ಮಾಡಿಕೊಡುವುದರಲ್ಲಿ ನೈಪುಣ್ಯತೆಯನ್ನು ಹೊಂದಿದ್ದರು.

ಶ್ರೀ ಬದರಿನಾರಾಯಣರವರೊಂದಿಗೆ ವಿವಾಹವಾದ ನಂತರ ಸದ್ಗೃಹಿಣಿಯಾಗಿ ಅತ್ತೆ ಜಯಲಕ್ಷ್ಮಮ್ಮ ಮಾವ ರಾಮಮೂರ್ತಿಯವರ ಮೆಚ್ಚುಗೆಗೆ ಪಾತ್ರರಾಗಿದ್ದು, ಮೇಘನಾ ಹಾಗೂ ಮಾನಸ ಇಬ್ಬರು ಪುತ್ರಿಯರನ್ನು ಹೊಂದಿರುತ್ತಾರೆ.

ಐದು ವರ್ಷಗಳಿಂದ ರಂಗವಲ್ಲಿಯನ್ನು ಹಾಕುವುದನ್ನು ಪ್ರಾರಂಭಿಸಿ ಅದರಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿರುತ್ತಾರೆ. ಇದಕ್ಕೆ ಮೂಲ ಕಾರಣ ರಂಗವಲ್ಲಿ ಎನ್ನುವ ವಾಟ್ಸ್ಯಾಪ್ ಗುಂಪಿನ ಅಧ್ಯಕ್ಷೆಯಾದ ಶ್ರೀಮತಿ ಲಕ್ಷ್ಮೀದೇವಿಯವರು ಎಂದು ಹೇಳಿದರೆ ತಪ್ಪಾಗಲಾರದು.

ಶ್ರೀಮತಿ ಲಕ್ಷ್ಮೀದೇವಿಯವರು ಶ್ರೀಮತಿ ವಾಗ್ದೇವಿ ಯವರನ್ನು ತಮ್ಮ ರಂಗವಲ್ಲಿ ಗುಂಪಿನ ಸದಸ್ಯರನ್ನಾಗಿಸಿದ ನಂತರವೇ ಅವರಲ್ಲಿ ರಂಗವಲ್ಲಿಯನ್ನು ಹಾಕುವುದರಲ್ಲಿ ಅತೀ ಹೆಚ್ಚಿನ ಆಸಕ್ತಿ ಮೂಡಿ, ಈ ದಿನ ತಾವು ತಮ್ಮ ರಂಗವಲ್ಲಿ ಹಾಕುವುದರ ಮೂಲಕ ಹಲವಾರು ಫ್ಯಾನ್–ಫಾಲೋವರ್ಸ್‌ಗಳನ್ನು ಗಳಿಸಿಕೊಂಡಿದ್ದಾರೆ ಎಂದರೆ ಅದು ಅತಿಶಯೋಕ್ತಿಯಲ್ಲ.

ಶ್ರೀಮತಿ ವಾಗ್ದೇಯವರು ಈ ಕಲೆಯನ್ನು ಈಗ ಬಹಳ ಗಂಭೀರವಾಗಿ ಪರಿಗಣಿಸಿ, ಹಲವಾರು ವಿನ್ಯಾಸಗಳನ್ನು ತಾವೇ ಸೃಷ್ಟಿಸಿ, ಈ ಸಾಂಪ್ರಾದಾಯಿಕ ಕಲೆಯನ್ನು ಉಳಿಸಿ, ಅದರ ಪ್ರಾಮುಖ್ಯತೆಯನ್ನು ತಿಳಿಸಿ, ಮುಖ್ಯವಾಗಿ ಹೆಂಗೆಳೆ ಯರಿಗೆ ಇದರಲ್ಲಿ ಆಸಕ್ತಿ ಮೂಡುವಂತೆ ಮಾಡಿ, ಸಂಸ್ಕೃತಿ ಯನ್ನು ಬೆಳೆಸುವುದರಲ್ಲಿ ಸ್ಫೂರ್ತಿ, ಮಾದರಿಯಾಗಿದ್ದಾರೆ.


ಶ್ರೀಮತಿ ವಾಗ್ದೇವಿಯವರ ಈ ಕಲೆಗೆ ಪ್ರೋತ್ಸಾಹ ನೀಡುವಲ್ಲಿ ಅತ್ತೆಯವರಾದ ಶ್ರೀಮತಿ ಜಯಲಕ್ಷ್ಮಮ್ಮ ರಾಮಮೂರ್ತಿಯವರು ಹಾಗೂ ಶ್ರೀ ಹೆಚ್.ಆರ್. ಬದರಿ ನಾರಾಯಣರವರ ಪಾತ್ರ ದೊಡ್ಡದು. “ಮನೆಯವರೆಲ್ಲರ ಪ್ರೋತ್ಸಾಹದಿಂದ ಮಾತ್ರ ನನ್ನ ಕಲೆಯನ್ನು ನಾನು ಹೊರತರಲು, ಬೆಳೆಸಿಕೊಳ್ಳಲು ಸಾಧ್ಯವಾಯಿತು” ಎಂದು ವಾಗ್ದೇವಿಯವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಶ್ರೀಮತಿ ವಾಗ್ದೇವಿಯವರು ಫೇಸ್ಬುಕ್ ಹಾಗೂ ವಾಟ್ಸ್ಯಾಪ್ ಸೇರಿದಂತೆ ಹಲವಾರು ಗುಂಪುಗಳಿಗೆ ಸದಸ್ಯರಾಗಿದ್ದಾಗ್ಯೂ “ರಂಗವಲ್ಲಿ” ಎನ್ನುವ ಗುಂಪಿನಿಂದ ತಮಗೆ ಬಹಳಷ್ಟು ಕಲಿಯಲು ಅವಕಾಶವಾಯಿತು ಎಂದು ಬಹಳ ಹರ್ಷದಿಂದ ಸ್ಮರಿಸುತ್ತಾರೆ.

“ರಂಗವಲ್ಲಿ” ಗುಂಪಿನ ಮೂಲಕ ತಮಗೆ “ಟೆಂಪಲ್ ವೆಂಚರ್” ಎಂಬ ವಿಶೇಷ ಶೀರ್ಷಿಕೆಯಡಿ ಶೃಂಗೇರಿಯ ಶಾರದಾಪೀಠಕ್ಕೆ ಎರಡು ಬಾರಿ, ಸಜ್ಜನ್ ರಾವ್ ಸರ್ಕಲ್, ಬೆಂಗಳೂರು ಕೋಟೆ ವೇಂಕಟೇಶ್ವರ ದೇವಾಲಯ, ರಾಜಾಜಿನಗರದ ಶ್ರೀರಾಮಮಂದಿರ ಹಾಗೂ ಆವನಿ ಶಂಕರಮಠ ಸೇರಿದಂತೆ ಈ ದೇವಾಲಯಗಳ ಪ್ರಾಕಾರ ಗಳಲ್ಲಿ ನೋಡುಗರ ಕಣ್ಮನ ಸೂರೆಗೊಳ್ಳುವಂತೆ ತೈಲವರ್ಣ ದಲ್ಲಿ ರಂಗವಲ್ಲಿಯನ್ನು ಬಿಡಿಸುವುದರ ಮೂಲಕ ಪರಮಾತ್ಮನ ಸೇವೆಯಲ್ಲಿ ಭಾಗಿಯಾಗಲು ಸಾಧ್ಯವಾದದ್ದು ನನ್ನ ಭಾಗ್ಯ ಹಾಗೂ ಇದು ನನ್ನ ಜೀವನದ ಒಂದು ಮೈಲಿಗಲ್ಲು” ಎಂದು ಭಾವುಕರಾಗಿ ಹೆಮ್ಮೆಯಿಂದ ಹೇಳಿ ಕೊಳ್ಳುತ್ತಾರೆ ಶ್ರೀಮತಿ ವಾಗ್ದೇವಿಯವರು.

ಶ್ರೀಮತಿ ವಾಗ್ದೇವಿಯವರು ದೊಡ್ಡ ದೊಡ್ಡ ರಂಗವಲ್ಲಿ ಯನ್ನು ಪ್ರತೀದಿನ ತಪ್ಪದೇ ಬಿಡಿಸುತ್ತಾರೆ. ಬಹಳ ಅಪರೂಪಕ್ಕೊಮ್ಮೆ ರಂಗವಲ್ಲಿಯನ್ನು ಬಿಡಿಸದಿದ್ದ ದಿನ ಅವರಿಗೆ ಏನೋ ಕಳೆದುಕೊಂಡಂತೆ ಭಾಸವಾಗುತ್ತದಂತೆ. ಬಹಳ ಪ್ರೀತಿ, ಶ್ರದ್ಧೆಯಿಂದ ತಾವು ರಂಗವಲ್ಲಿಯನ್ನು ತರಹೇವಾರಿ ವಿನ್ಯಾಸಗಳಲ್ಲಿ ಬಿಡಿಸಿ, ಪರಮಾತ್ಮನಾದ ಶ್ರೀರಂಗನಾಥನ ಕೃಪೆಗೆ ಪಾತ್ರರಾಗುತ್ತಿದ್ದಾರೆ.

ಬೃಹಚ್ಚರಣ ಸಂಘದ ಸದಸ್ಯರು ಶ್ರೀಮತಿ ವಾಗ್ದೇವಿ ಯವರ ರಂಗವಲ್ಲಿಯ ಚಿತ್ರಗಳನ್ನು ವಾಟ್ಸಾಪ್‌ನಲ್ಲಿ ಪ್ರತಿದಿನ ನೋಡಿ “ಶಹಭಾಸ್” ಎನ್ನುತ್ತ ಶುಭ ಹಾರೈಸುತ್ತಾರೆ.



◆ **ಲಲಿತಾ ರಮೇಶ್**
**9945199637**

# ರಂಗೋಲಿ ಕಲಾ ಚಿತ್ರಗಳು......

ಶ್ರೀಮತಿ ವಾಗ್ದೇವಿ ಬದರಿನಾರಾಯಣ್



## ಸಂಘದ ನೋಂದಣಿ ಪತ್ರ










ಸಂಘದ ಸದಸ್ಯ ಶ್ರೀ **ಎನ್. ಶಿವಕುಮಾರ್**‌ರವರ ವನ್ಯಜೀವಿ ಛಾಯಾಚಿತ್ರವು **ಭಾರತ** ಮತ್ತು **ರಷ್ಯಾ** ಜಂಟಿಯಾಗಿ ಆಯೋಜಿಸಿರುವ ಹೊರಾಂಗಣ ಛಾಯಾಚಿತ್ರ ಪ್ರದರ್ಶನಕ್ಕೆ ಆಯ್ಕೆಯಾಗಿರುವುದು ಎಲ್ಲರಿಗೂ ಹೆಮ್ಮೆ ತರುವ ವಿಷಯ. ಇನ್ನೂ ಹೆಚ್ಚಿನ ಮನ್ನಣೆ ದೊರಕಲೆಂದು ಸಂಘ ಹಾರೈಸುತ್ತದೆ

ಸಂಘದ ಮಹಾ ಪೋಷಕ **ಶ್ರೀ ವೆಂಕಟಗಿರಿಯಪ್ಪನವರು** (ಸಂಘದ ಪೋಷಕರಾದ ಶ್ರೀ ಕರ್ನಲ್ ವಿ.ಎಸ್. ರಾಜನ್, ಶ್ರೀ ವಿ.ಎಸ್. ಮಣಿರವರ ತಂದೆ) ನೂರನೇ ವರ್ಷಕ್ಕೆ ಕಾಲಿಟ್ಟ ಸಂದರ್ಭದಲ್ಲಿ **ಸಂಘದ ಸದಸ್ಯರೆಲ್ಲಾ ಶುಭ ಹಾರೈಸಿರುತ್ತಾರೆ.**





ಸಂಘದ ಸದಸ್ಯರು ಡಾ॥ ಎಂ.ಎಸ್. ಶಶಿಕುಮಾರ್ ಅವರು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯದ ಜಂಟಿ ನಿರ್ದೇಶಕರಾಗಿ ಬಡ್ತಿ ಹೊಂದಿರುತ್ತಾರೆ



ಸಂಘದ ಪೋಷಕರಾದ **ಶ್ರೀ ಬಿ.ವಿ. ಶೇಷಾದ್ರಿಯವರು** ತಮ್ಮ ಸೋದರಿ ಶ್ರೀಮತಿ ಬಿ.ವಿ. ಪದ್ಮಾರವರ ಹೆಸರಿನಲ್ಲಿ **ಶಂಕರ ಕ್ಯಾನ್ಸರ್ ಆಸ್ಪತ್ರೆಗೆ** ರೂ. 12 ಲಕ್ಷ ದೇಣಿಗೆ ನೀಡಿರುತ್ತಾರೆ

ಯಾದವ ಸೇವಾ ಪ್ರತಿಷ್ಠಾನದವರು ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಏರ್ಪಡಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಶ್ರೀಮತಿ ವಾಗ್ದೇವಿಯವರು ರಚಿಸಿದ ರಂಗೋಲಿ



*If undelivered please return to :*
*President*
**‘Bruhacharana Sangha’**
No. 27/1, Bull Temple Road,
Basavanagudi,
Bengaluru - 560 004.

To,

Book-Post

Published by Sri B. Subramanyam, President, ‘BRUHACHARANA SANGHA’ No. 27/1, Bull Temple Road, Basavanagudi, Bengaluru - 560 004.
Printed at Keerthi Printers, Omkara, 240-F, 2nd D Cross, 2nd ‘B’ Main, Girinagar 1st Phase, Bengaluru - 560 085, Ph : 080-26722034